"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

17ನೇ ಫೆಬ್ರವರಿ 2020
ಸೋಮವಾರ

## ವಿಷಯಾನುಕ್ರಮಣಿಕೆ

1. ಉಭಯ ಸದನಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಗಳ ಮಂಡನೆ.

2. ಪ್ರಕಟಣೆಗಳು.

3. ಸಂತಾಪ ಸೂಚನೆ.

ಕರ್ನಾಟಕದ ಮಾಜಿ ರಾಜ್ಯಪಾಲರಾಗಿದ್ದ ಟಿ.ಎನ್. ಚತುರ್ವೇದಿ, ವಿಧಾನ ಪರಿಷತ್ತಿನ ಮಾಜಿ ಸಭಾಪತಿ, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಉಪಸಭಾಧ್ಯಕ್ಷರಾಗಿದ್ದ ಡಿ. ಮಂಜುನಾಥ, ಮಾಜಿ ಸಚಿವರು, ಉಭಯ ಸದನಗಳ ಸದಸ್ಯರಾಗಿದ್ದ ಡಾ:ವೈಜನಾಥ ಪಾಟೀಲ್, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಜಿ. ಮಾದಪ್ಪ, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರುಗಳಾಗಿದ್ದ ಮಲ್ಲಾರಿಗೌಡ ಶಂಕರಗೌಡ ಪಾಟೀಲ್ ಮತ್ತು ಅಮರನಾಥಶೆಟ್ಟಿ, ವಿಧಾನ ಸಭೆಯ ಮಾಜಿ ಸದಸ್ಯರುಗಳಾಗಿದ್ದ ನಾರಾಯಣರಾವ್ ಗೋವಿಂದ ತರಳೆ ಮತ್ತು ಚಂದ್ರಕಾಂತ್ ಗುರುಪಾದಪ್ಪ ಸಿಂದೋಲ್, ಪೇಜಾವರ ಮಠದ ಮುಖ್ಯಸ್ಥರಾಗಿದ್ದ ಶ್ರೀ ವಿಶ್ವೇಶ್ವರ ತೀರ್ಥ ಸ್ವಾಮೀಜಿ, ಸ್ಯಾಕ್ಸೋಫೋನ್ ವಾದಕರಾದ ಕದ್ರಿ ಗೋಪಾಲನಾಥ್, ಹಿರಿಯ ಲೇಖಕರಾಗಿದ್ದ ಡಾ:ಎಂ.ಚಿದಾನಂದಮೂರ್ತಿ ಹಾಗೂ ಇತರ ಗಣ್ಯರ ನಿಧನದ ಬಗ್ಗೆ.

– ಶ್ರೀ ಕೋಟ ಶ್ರೀನಿವಾಸ ಪೂಜಾರಿ( ಸಭಾನಾಯಕರು)
– ಶ್ರೀ ಎಸ್.ಆರ್.ಪಾಟೀಲ್ (ವಿರೋಧಪಕ್ಷದ ನಾಯಕರು)

<><><>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(01)17.02.2020/12.00/ಎಸ್‌ಕೆ-ಬಿಎನ್‌ಎಸ್

***ಕರ್ನಾಟಕ ವಿಧಾನ ಪರಿಷತ್ತು***

**ಸೋಮವಾರ, 17ನೇ ಫೆಬ್ರವರಿ 2020**

ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಅಪರಾಹ್ನ **12** ಗಂಟೆ **08** ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ (**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ**) ಯವರು ಪೀಠವನ್ನು ಅಲಂಕರಿಸಿದರು.

**(ಸದನವು "ವಂದೇ ಮಾತರಂ" ಗೀತೆಯೊಂದಿಗೆ ಪ್ರಾರಂಭಗೊಂಡಿತು)**

(02)17.02.2020,12.10,ಟಿಸಿಹೆಚ್-ಕೆಎಸ್+(03)12.20 ಎಂ.ಎಂ-ಕೆಎಸ್+(04)12.30 ಕೆಹೆಚ್-ವಿಕೆ

**1. ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಗಳ ಮಂಡನೆ:**

**ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು:-** ಮಾನ್ಯ ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

(ಕನ್ನಡ, ಆಂಗ್ಲ ಮತ್ತು ಹಿಂದಿ ಪ್ರತಿಗಳನ್ನು ಲಗತ್ತಿಸಲಾಗಿದೆ)

**ಸಭಾಪತಿಯವರು:-** ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 2. ಪ್ರಕಟಣೆಗಳು

**ಸಭಾಪತಿಯವರು:–** ಅ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 9ರ ಮೇರೆಗೆ ಮಾನ್ಯ ಸಭಾಪತಿಯವರ ಮತ್ತು ಮಾನ್ಯ ಉಪ ಸಭಾಪತಿಯವರ ಗೈರುಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು 139ನೇ ಅಧಿವೇಶನದಲ್ಲಿ ನಾಮ ನಿರ್ದೇಶನ ಮಾಡಲಾದ ಈ ಕೆಳಕಂಡ ಶಾಸಕರುಗಳನ್ನು ಪ್ರಸ್ತುತ ಅಧಿವೇಶನಕ್ಕೂ ಮುಂದುವರೆಸಲಾಗಿದೆ.

1. ಶ್ರೀ ಕೆ.ಸಿ.ಕೊಂಡಯ್ಯ
2. ಶ್ರೀ ಅಲ್ಲಂ ವೀರಭದ್ರಪ್ಪ
3. ಡಾ॥ ತೇಜಸ್ವಿನಿ ಗೌಡ
4. ಶ್ರೀ ಕೆ.ಟಿ.ಶ್ರೀಕಂಠೇಗೌಡ

**ಆ)** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 222ರ ಮೇರೆಗೆ 140ನೇ ಅಧಿವೇಶನದಲ್ಲಿ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಈ ಮುಂದಿನಂತೆ ರಚಿಸಲಾಗಿರುತ್ತದೆ:

| ಕ್ರಮ ಸಂಖ್ಯೆ | ಹೆಸರುಗಳು<br>ಶ್ರೀಯುತರುಗಳಾದ | ಸ್ಥಾನ |
|---|---|---|
| 01 | ಎಸ್.ಎಲ್ ಧರ್ಮೇಗೌಡ<br>ಮಾನ್ಯ ಉಪ ಸಭಾಪತಿಯವರು | ಸದಸ್ಯರು |
| 02 | ಕೋಟ ಶ್ರೀನಿವಾಸ ಪೂಜಾರಿ<br>ಮಾನ್ಯ ಸಭಾನಾಯಕರು | ಸದಸ್ಯರು |
| 03 | ಎಸ್.ಆರ್.ಪಾಟೀಲ್<br>ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರು | ಸದಸ್ಯರು |
| 04 | ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ<br>ವಿಧಾನ ಪರಿಷತ್ತಿನ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು | ಸದಸ್ಯರು |
| 05 | ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು | ಸದಸ್ಯರು |
| 06 | ಬಸವರಾಜ ಶಿವಲಿಂಗಪ್ಪ ಹೊರಟ್ಟಿ<br>ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |
| 07 | ಆಯನೂರು ಮಂಜುನಾಥ್ | ಸದಸ್ಯರು |

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

| | | |
|---|---|---|
| | ವಿಧಾನ ಪರಿಷತ್ತಿನ ಸದಸ್ಯರು | |
| 08 | ಕೆ.ಸಿ.ಕೊಂಡಯ್ಯ<br>ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |
| 09 | ಅಲ್ಲಂ ವೀರಭದ್ರಪ್ಪ<br>ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |
| **ವಿಶೇಷ ಆಹ್ವಾನಿತರು** | | |
| **10** | ಶ್ರೀ ಬಿ.ಎಸ್.ಯಡಿಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳು | |
| **11** | ಶ್ರೀ ಜೆ.ಸಿ.ಮಾಧುಸ್ವಾಮಿ<br>ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು | |

**ಮಾನ್ಯ ಸಭಾಪತಿಯವರು ಕಾರ್ಯಕಲಾಪಗಳ ಸಲಹಾ ಸಮಿತಿಯ ಅಧ್ಯಕ್ಷರಾಗಿರುತ್ತಾರೆ.**

**3. ಸಂತಾಪ ಸೂಚನೆ**

ವಿಷಯ:- ಕರ್ನಾಟಕದ ಮಾಜಿ ರಾಜ್ಯಪಾಲರಾಗಿದ್ದ ಟಿ.ಎನ್. ಚತುರ್ವೇದಿ, ವಿಧಾನ ಪರಿಷತ್ತಿನ ಮಾಜಿ ಸಭಾಪತಿ, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಉಪಸಭಾಧ್ಯಕ್ಷರಾಗಿದ್ದ ಡಿ. ಮಂಜುನಾಥ, ಮಾಜಿ ಸಚಿವರು, ಉಭಯ ಸದನಗಳ ಸದಸ್ಯರಾಗಿದ್ದ ಡಾ:ವೈಜನಾಥ ಪಾಟೀಲ್, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಜಿ. ಮಾದಪ್ಪ, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರುಗಳಾಗಿದ್ದ ಮಲ್ಲಾರಿಗೌಡ ಶಂಕರಗೌಡ ಪಾಟೀಲ್ ಮತ್ತು ಅಮರನಾಥಶೆಟ್ಟಿ, ವಿಧಾನ ಸಭೆಯ ಮಾಜಿ ಸದಸ್ಯರುಗಳಾಗಿದ್ದ ನಾರಾಯಣರಾವ್ ಗೋವಿಂದ ತರಳೆ ಮತ್ತು ಚಂದ್ರಕಾಂತ್ ಗುರುಪಾದಪ್ಪ ಸಿಂದೋಲ್, ಪೇಜಾವರ ಮಠದ ಮುಖ್ಯಸ್ಥರಾಗಿದ್ದ ಶ್ರೀ ವಿಶ್ವೇಶ್ವರ ತೀರ್ಥ ಸ್ವಾಮೀಜಿ, ಸ್ಯಾಕ್ಸೋಫೋನ್ ವಾದಕರಾದ ಕದ್ರಿ ಗೋಪಾಲನಾಥ್, ಹಿರಿಯ ಲೇಖಕರಾಗಿದ್ದ ಡಾ:ಎಂ.ಚಿದಾನಂದಮೂರ್ತಿ, ಯಕ್ಷಗಾನ ಪಾರಂಗತರಾದ ಹೊಸ್ತೋಟ ಮಂಜುನಾಥ ಭಾಗವತ, ಹಿರಿಯ ಸಾಹಿತಿಗಳಾದ ಡಾ:ಚೆನ್ನಣ್ಣ ವಾಲೀಕಾರ, ಖ್ಯಾತ ಕೃಷಿ ವಿಜ್ಞಾನಿಯಾದ ಪ್ರೊ:ಎಸ್.ಎಸ್. ಕಟಗಿಹಳ್ಳಿಮಠ, ನಾಸಾ ಸಂಸ್ಥೆಯ ನಿವೃತ್ತ ವಿಜ್ಞಾನಿಯಾದ ಡಾ:ನವರತ್ನ ಶ್ರೀನಿವಾಸ ರಾಜರಾಮ್, ಹಿರಿಯ ಸಾಹಿತಿಗಳಾದ ಚಂದ್ರಕಾಂತ ಕರದಳ್ಳಿ, ಖ್ಯಾತ ಸಂಗೀತ ಶಾಸ್ತ್ರಜ್ಞರಾಗಿದ್ದ ಡಾ: ಆರ್. ಸತ್ಯನಾರಾಯಣ ಅವರುಗಳ ನಿಧನದ ಬಗ್ಗೆ.

**ಸಭಾಪತಿಯವರು:-** ಕರ್ನಾಟಕದ ಮಾಜಿ ರಾಜ್ಯಪಾಲರಾಗಿದ್ದ ಟಿ.ಎನ್. ಚತುರ್ವೇದಿ, ವಿಧಾನ ಪರಿಷತ್ತಿನ ಮಾಜಿ ಸಭಾಪತಿ, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಉಪಸಭಾಧ್ಯಕ್ಷರಾಗಿದ್ದ ಡಿ. ಮಂಜುನಾಥ, ಮಾಜಿ ಸಚಿವರು, ಉಭಯ ಸದನಗಳ ಸದಸ್ಯರಾಗಿದ್ದ ಡಾ:ವೈಜನಾಥ ಪಾಟೀಲ್, ವಿಧಾನ ಪರಿಷತ್ತಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಜಿ ಸದಸ್ಯರಾಗಿದ್ದ ಜಿ. ಮಾದಪ್ಪ, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರುಗಳಾಗಿದ್ದ ಮಲ್ಲಾರಿಗೌಡ ಶಂಕರಗೌಡ ಪಾಟೀಲ್ ಮತ್ತು ಅಮರನಾಥಶೆಟ್ಟಿ, ವಿಧಾನ ಸಭೆಯ ಮಾಜಿ ಸದಸ್ಯರುಗಳಾಗಿದ್ದ ನಾರಾಯಣರಾವ್ ಗೋವಿಂದ ತರಳೆ ಮತ್ತು ಚಂದ್ರಕಾಂತ್ ಗುರುಪಾದಪ್ಪ ಸಿಂದೋಲ್, ಪೇಜಾವರ ಮಠದ ಮುಖ್ಯಸ್ಥರಾಗಿದ್ದ ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿ, ಸ್ಯಾಕ್ಸೋಫೋನ್ ವಾದಕರಾದ ಕದ್ರಿ ಗೋಪಾಲನಾಥ್, ಹಿರಿಯ ಲೇಖಕರಾಗಿದ್ದ ಡಾ:ಎಂ. ಚಿದಾನಂದಮೂರ್ತಿ, ಯಕ್ಷಗಾನ ಪಾರಂಗತರಾದ ಹೊಸ್ತೋಟ ಮಂಜುನಾಥ ಭಾಗವತ, ಹಿರಿಯ ಸಾಹಿತಿಗಳಾದ ಡಾ:ಚೆನ್ನಣ್ಣ ವಾಲೀಕಾರ, ಖ್ಯಾತ ಕೃಷಿ ವಿಜ್ಞಾನಿಯಾದ ಪ್ರೊ:ಎಸ್.ಎಸ್. ಕಟಗಿಹಳ್ಳಿಮಠ, ನಾಸಾ ಸಂಸ್ಥೆಯ ನಿವೃತ್ತ ವಿಜ್ಞಾನಿಯಾದ ಡಾ:ನವರತ್ನ ಶ್ರೀನಿವಾಸ ರಾಜರಾಮ್, ಹಿರಿಯ ಸಾಹಿತಿಗಳಾದ ಚಂದ್ರಕಾಂತ ಕರದಳ್ಳಿ, ಖ್ಯಾತ ಸಂಗೀತ ಶಾಸ್ತ್ರಜ್ಞರಾಗಿದ್ದ ಡಾ: ಆರ್. ಸತ್ಯನಾರಾಯಣ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

<u>**01. ಟಿ.ಎನ್. ಚತುರ್ವೇದಿ**</u>

**ಪದ್ಮವಿಭೂಷಣ ಪುರಸ್ಕೃತ ಕರ್ನಾಟಕದ ಮಾಜಿ ರಾಜ್ಯಪಾಲರಾಗಿದ್ದ ತ್ರಿಲೋಕಿ ನಾಥ್ ಚತುರ್ವೇದಿ ಅವರು ದಿನಾಂಕ: 05.01.2020 ರಂದು ನಿಧನ ಹೊಂದಿರುತ್ತಾರೆ.**

1929ರ ಜನವರಿ, 18ರಂದು ಉತ್ತರ ಪ್ರದೇಶದ ಕನ್ನೌಜ್ ಜಿಲ್ಲೆಯಲ್ಲಿ ಜನಿಸಿದ್ದ ಶ್ರೀಯುತರು ಭಾರತೀಯ ಆಡಳಿತ ಸೇವೆಯ ಅಧಿಕಾರಿಯಾಗಿ ಸೇವೆಯನ್ನು ಸಲ್ಲಿಸಿದ್ದು, ನಿವೃತ್ತಿಯ ನಂತರ 1984 ರಿಂದ 1989ರವರೆಗೆ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಅಗಿ ಕಾರ್ಯನಿರ್ವಹಿಸಿದ್ದರು. ಶ್ರೀಯುತರು 2002 ರಿಂದ 2007ರವರೆಗೆ ಕರ್ನಾಟಕ ರಾಜ್ಯಪಾಲರಾಗಿದ್ದರಲ್ಲದೆ 2004ರಲ್ಲಿ ಕೇರಳ ರಾಜ್ಯದ ರಾಜ್ಯಪಾಲರಾಗಿಯೂ ಸಹ ಕಾರ್ಯನಿರ್ವಹಿಸಿರುತ್ತಾರೆ.

ಶ್ರೀಯುತರು 05.07.1992 ರಿಂದ 20.08.2002ರವರೆಗೆ ಎರಡು ಬಾರಿ ರಾಜ್ಯಸಭೆಯ ಸದಸ್ಯರಾಗಿ, ರಾಜ್ಯಸಭೆಯ ಉಪ ಸಭಾಪತಿಗಳಾಗಿ ಕಾರ್ಯನಿರ್ವಹಿಸಿರುವುದಲ್ಲದೆ, ಮಸ್ಸೂರಿಯ ನ್ಯಾಷನಲ್ ಅಕಾಡೆಮಿ ಆಫ್ ಅಡ್ಮಿನಿಸ್ಟ್ರೇಷನ್‌ನ ಜಂಟಿ ನಿರ್ದೇಶಕರಾಗಿಯು ಸೇವೆಯನ್ನು ಸಲ್ಲಿಸಿರುವ ಶ್ರೀಯುತರು 1991ರಲ್ಲಿ  ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾಗಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ಮುತ್ಸದ್ದಿ, ಸರಳ ಸಜ್ಜನ ರಾಜಕಾರಣಿ ಹಾಗೂ ದಕ್ಷ ಆಡಳಿತಗಾರರೊಬ್ಬರನ್ನು ಕಳೆದುಕೊಂಡಂತಾಗಿದೆ.**

## 2. ಡಿ. ಮಂಜುನಾಥ್

**ವಿಧಾನ ಪರಿಷತ್ತಿನ ಮಾಜಿ ಸಭಾಪತಿ, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಉಪ ಸಭಾಧ್ಯಕ್ಷರಾಗಿದ್ದ ಡಿ.ಮಂಜುನಾಥ್ ಅವರು ದಿನಾಂಕ: 03.02.2020 ರಂದು ನಿಧನ ಹೊಂದಿರುತ್ತಾರೆ.**

1928ರ ಆಗಸ್ಟ್, 26 ರಂದು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಜಾಜೂರು ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಬಿ.ಎಸ್ಸಿ. ಬಿ.ಎಲ್., ಪದವೀಧರರಾಗಿದ್ದರು.

1959ರಲ್ಲಿ ಚಳ್ಳಕೆರೆ ತಾಲ್ಲೂಕು ಅಭಿವೃದ್ಧಿ ಮಂಡಳಿಗೆ ಆಯ್ಕೆಯಾಗುವ ಮೂಲಕ ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿರುತ್ತಾರೆ. ಜಿಲ್ಲಾ ಜನತಾ ಪಾರ್ಟಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು 1967, 1994 ಹಾಗೂ 2004ರಲ್ಲಿ ಹಿರಿಯೂರು ಮೀಸಲು ಕ್ಷೇತ್ರದಿಂದ 3 ಬಾರಿ ವಿಧಾನಸಭಾ ಸದಸ್ಯರಾಗಿ, 1983ರಲ್ಲಿ ವಿಧಾನ ಪರಿಷತ್ತಿಗೆ ನಾಮ ನಿರ್ದೇಶಿತ ಸದಸ್ಯರಾಗಿ ಮತ್ತು 1986ರಲ್ಲಿ ವಿಧಾನಸಭಾ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರು 1967ರಲ್ಲಿ ವಿಧಾನ ಸಭೆಯ ಉಪ ಸಭಾಧ್ಯಕ್ಷರಾಗಿ ಹಾಗೂ 1987ರಲ್ಲಿ ವಿಧಾನ ಪರಿಷತ್ತಿನ ಸಭಾಪತಿಯಾಗಿ ಕಾರ್ಯನಿರ್ವಹಿಸಿರುತ್ತಾರೆ. 1984ರಲ್ಲಿ ಯೋಜನಾ ಸಚಿವರಾಗಿ, 1985ರಲ್ಲಿ ಕಾರ್ಮಿಕ ಸಚಿವರಾಗಿ, 1986, 1994, 2004ರಲ್ಲಿ ಮೂರು ಬಾರಿ ಉನ್ನತ ಶಿಕ್ಷಣ ಸಚಿವರಾಗಿ ಹಾಗೂ 1998ರಲ್ಲಿ ಅರಣ್ಯ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ.

**ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

“ತಿದ್ದುಪ

## 03. ಡಾ: ವೈಜನಾಥ ಪಾಟೀಲ್

**ಮಾಜಿ ಸಚಿವರು, ವಿಧಾನ ಪರಿಷತ್ತಿನ ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಡಾ: ವೈಜನಾಥ ಪಾಟೀಲ್ ಅವರು ದಿನಾಂಕ:02.11.2019 ರಂದು ನಿಧನ ಹೊಂದಿರುತ್ತಾರೆ.**

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1941ನೇ ನವೆಂಬರ್ 21ರಂದು ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಹಕ್ಯಾಲಾ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ., ಎಲ್.ಎಲ್.ಬಿ., ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು.

ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿ ಹೋರಾಟದಲ್ಲಿ ಮಹತ್ತರ ಪಾತ್ರವನ್ನು ವಹಿಸಿದ್ದ ಶ್ರೀಯುತರು ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿಯ ಅಧ್ಯಕ್ಷರಾಗಿದ್ದು, ಈ ಭಾಗಕ್ಕೆ ಸಂವಿಧಾನದ 371(ಜೆ) ಅಡಿ ವಿಶೇಷ ಸ್ಥಾನಮಾನ ದೊರಕಿಸಿ ಕೊಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದ ಶ್ರೀಯುತರು ಶಿಕ್ಷಕರ ಕ್ಷೇತ್ರದಿಂದ 1984–1990ರ ಅವಧಿಗೆ ವಿಧಾನ ಪರಿಷತ್ತಿಗೆ ಚುನಾಯಿತರಾಗಿದ್ದರು. 1994 ಮತ್ತು 2004 ರಲ್ಲಿ ಚಿಂಚೋಳಿ ವಿಧಾನಸಭಾ ಕ್ಷೇತ್ರದಿಂದ ವಿಧಾನ ಸಭೆಗೆ ಚುನಾಯಿತರಾಗಿದ್ದ, ಶ್ರೀಯುತರು ಶ್ರೀ ರಾಮಕೃಷ್ಣ ಹೆಗಡೆಯವರ ಸಚಿವ ಸಂಪುಟದಲ್ಲಿ ತೋಟಗಾರಿಕೆ ಸಚಿವರಾಗಿ ಶ್ರೀ ಹೆಚ್.ಡಿ.ದೇವೇಗೌಡರವರ ಸಚಿವ ಸಂಪುಟದಲ್ಲಿ ನಗರಾಭಿವೃದ್ಧಿ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರ ಸಾಮಾಜಿಕ ಸೇವೆಗಾಗಿ ಗುಲ್ಬರ್ಗಾ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ಹೋರಾಟಗಾರ, ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

## 04. ಜಿ. ಮಾದಪ್ಪ

**ಸ್ವಾತಂತ್ರ್ಯ ಹೋರಾಟಗಾರ, ಹಿರಿಯ ಸಮಾಜವಾದಿ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಜಿ. ಮಾದಪ್ಪ ಅವರು ದಿನಾಂಕ:05.02.2020ರಂದು ನಿಧನ ಹೊಂದಿರುತ್ತಾರೆ.**

1933ರ ಜೂನ್, 20ರಂದು ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಯರೇಹಳ್ಳಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಕಾಂ., ಡಿ.ಎಸ್.ಎಸ್.ಸಿ., ಎಫ್.ಐ.ಎ., ಪದವೀಧರರಾಗಿದ್ದರು. ವೃತ್ತಿಯಲ್ಲಿ ಆದಾಯ ತೆರಿಗೆ ಮತ್ತು ಮಾರಾಟ ತೆರಿಗೆ ಸಲಹೆಗಾರರಾಗಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಶ್ರೀಯುತರು ಖಾದಿ ಗ್ರಾಮೋದ್ಯೋಗ, ಶಿಕ್ಷಣ ಮತ್ತು ಸಹಕಾರ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿದ್ದ ಶ್ರೀಯುತರು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ 1988 ರಿಂದ 1994ರ ಅವಧಿಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

**ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಸರಳ ಸಜ್ಜನ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.**

## 05. ಮಲ್ಲಾರಿಗೌಡ ಶಂಕರಗೌಡ ಪಾಟೀಲ್

**ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಮಲ್ಲಾರಿಗೌಡ ಶಂಕರಗೌಡ ಪಾಟೀಲ್ ಅವರು ದಿನಾಂಕ:31.12.2019 ರಂದು ನಿಧನ ಹೊಂದಿರುತ್ತಾರೆ.**

1940ರ ನವೆಂಬರ್, 21ರಂದು ಬೆಳಗಾವಿ ಜಿಲ್ಲೆಯ ಸಂಕೇಶ್ವರ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಪಿ.ಯು.ಸಿ ಯವರೆಗೆ ವ್ಯಾಸಂಗವನ್ನು ಮಾಡಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು.

1978ರಲ್ಲಿ ಮೊದಲ ಬಾರಿಗೆ ವಿಧಾನಸಭೆಗೆ ಸಂಕೇಶ್ವರ ಕ್ಷೇತ್ರದಿಂದ ಚುನಾಯಿತರಾಗಿದ್ದ ಶ್ರೀಯುತರು 6ನೇ, 7ನೇ, 8ನೇ ವಿಧಾನಸಭೆಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. 1989-1990ರ ಅವಧಿಯಲ್ಲಿ ವಿಧಾನಸಭೆಯ ಸರ್ಕಾರಿ ಮುಖ್ಯ ಸಚೇತಕರಾಗಿ, ಶ್ರೀ ಎಸ್.ಬಂಗಾರಪ್ಪ ಅವರ ಸಚಿವ ಸಂಪುಟದಲ್ಲಿ ಭಾರಿ ಮತ್ತು ಮಧ್ಯ ನೀರಾವರಿ ಸಚಿವರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ರಾಜ್ಯ ಸಲಹಾ ಮಂಡಳಿಯ ಸದಸ್ಯರಾಗಿ ಅಲ್ಲದೆ ಇತರೆ ಹಲವಾರು ಸಂಘ ಸಂಸ್ಥೆಗಳ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಇವರು 1991ರಲ್ಲಿ ಆದ್ಯ ಶ್ರೀ ನಿಜಲಿಂಗೇಶ್ವರ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ, ಶಾಲೆ, ಪದವಿ ಕಾಲೇಜು, ಹೋಮಿಯೋಪಥಿ, ಕಾನೂನು ಕಾಲೇಜುಗಳನ್ನು ಸ್ಥಾಪಿಸುವ ಮೂಲಕ ಶೈಕ್ಷಣಿಕ ಕ್ಷೇತ್ರಕ್ಕೂ ಅಪಾರವಾದ ಕೊಡುಗೆಯನ್ನು ನೀಡಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ, ಮುತ್ಸದ್ದಿ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.**

## 06. ಅಮರನಾಥ ಶೆಟ್ಟಿ

**ಮಾಜಿ ಸಚಿವರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಅಮರನಾಥ ಶೆಟ್ಟಿ ಅವರು ದಿನಾಂಕ: 27.01.2020 ರಂದು ನಿಧನ ಹೊಂದಿರುತ್ತಾರೆ.**

1940ನೇ ಏಪ್ರಿಲ್, 22ರಂದು ಮಂಗಳೂರಿನಲ್ಲಿ ಜನಿಸಿದ್ದ ಶ್ರೀಯುತರು ಎಸ್.ಎಸ್.ಎಲ್.ಸಿವರೆಗೆ ವ್ಯಾಸಂಗ ಮಾಡಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಯುತರು ಜನತಾ ಪಕ್ಷದ ರಾಜ್ಯ ಹಾಗೂ ಜಿಲ್ಲಾಮಟ್ಟದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಬ್ಲಾಕ್ ಜಿಲ್ಲಾ ಕಾರ್ಯಕಾರಿ ಸಮಿತಿ, ಮೂಡಬಿದ್ರಿ ಇದರ ಅಧ್ಯಕ್ಷರಾಗಿ, ಕಾಡನ್ದಲೆ ಶ್ರೀ ಸುಬ್ರಮಣ್ಯ ಪ್ರೌಢಶಾಲಾ ಶಿಕ್ಷಣ ನ್ಯಾಸದ (ಟ್ರಸ್ಟ್) ಅಧ್ಯಕ್ಷರಾಗಿ, ಮೂಡಬಿದ್ರಿ ರೋಟರಿ ಕ್ಲಬ್ಬಿನ ಅಧ್ಯಕ್ಷರಾಗಿ ಹಾಗೂ ಇತರೆ ಹಲವಾರು ಸಂಘ ಸಂಸ್ಥೆಗಳಲ್ಲಿ ನಿರ್ದೇಶಕರಾಗಿ, ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದ ಶ್ರೀಯುತರು ತಮ್ಮ ಸರಳ ಸಜ್ಜನಿಕೆಯ ನಡವಳಿಕೆಯಿಂದ ಸಜ್ಜನ ರಾಜಕಾರಣಿಯೆಂದೇ ಹೆಸರಾಗಿದ್ದರು.

ಶ್ರೀಯುತರು ಮೂಡಬಿದ್ರೆ ಕ್ಷೇತ್ರದಿಂದ 7ನೇ, 8ನೇ ಮತ್ತು 10ನೇ ವಿಧಾನಸಭೆಯ ಸದಸ್ಯರಾಗಿ ಆಯ್ಕೆಯಾಗಿದ್ದರು. 1984, 1987, 1988ರಲ್ಲಿ ಪ್ರವಾಸೋದ್ಯಮ, ಧಾರ್ಮಿಕ ದತ್ತಿ ರಾಜ್ಯ ಸಚಿವರಾಗಿ ಹಾಗೂ ನಿಯಂತ್ರಿತ ಮಾರುಕಟ್ಟೆಗಳು ಮತ್ತು ಖುಷ್ಕಿ ಜಮೀನು ಅಭಿವೃದ್ಧಿ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ.

**ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

"ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 07. ನಾರಾಯಣರಾವ್ ಗೋವಿಂದ ತರಳೆ

**ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ನಾರಾಯಣರಾವ್ ಗೋವಿಂದ ತರಳೆ ಅವರು ದಿನಾಂಕ:25.11.2019ರಂದು ನಿಧನ ಹೊಂದಿರುತ್ತಾರೆ.**

1937ರ ಜೂನ್, 16ರಂದು ಬೆಳಗಾವಿ ಜಿಲ್ಲೆಯ, ನಿಲೇಜಿ ತಾಲ್ಲೂಕಿನಲ್ಲಿ ಜನಿಸಿದ್ದ ಶ್ರೀಯುತರು ಕಲಾ ಪದವೀಧರರಾಗಿದ್ದು, ವೃತ್ತಿಯಲ್ಲಿ ಸರಕು ಸಾಗಾಣಿಕೆದಾರರಾಗಿದ್ದರು. ಮರಾಠ ಮಂಡಳ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದ್ದ ಶ್ರೀಯುತರು 10ನೇ ವಿಧಾನಸಭೆಗೆ ಬೆಳಗಾವಿ ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

**ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ಸಜ್ಜನ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**08. ಚಂದ್ರಕಾಂತ ಗುರುಪಾದಪ್ಪ ಸಿಂದೋಲ್**

**ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಚಂದ್ರಕಾಂತ ಗುರುಪಾದಪ್ಪ ಸಿಂದೋಲ್ ಅವರು ದಿನಾಂಕ:07.02.2020ರಂದು ನಿಧನ ಹೊಂದಿರುತ್ತಾರೆ.**

1939ರ ಸೆಪ್ಟೆಂಬರ್, 20ರಂದು ಬೀದರ್‌ನಲ್ಲಿ ಜನಿಸಿದ್ದ ಶ್ರೀಯುತರು ಬಿ.ಕಾಂ., ಎಲ್.ಎಲ್.ಬಿ., ಪದವೀಧರರಾಗಿದ್ದು ವೃತ್ತಿಯಲ್ಲಿ ವಕೀಲರಾಗಿದ್ದರು. ಅಂಗವಿಕಲರು, ಅನಾಥರು, ಕಾರ್ಮಿಕರು ಹಾಗೂ ಬುಡಕಟ್ಟು ಜನಾಂಗದವರ ಏಳಿಗೆಗಾಗಿ ಅವಿರತವಾಗಿ ಶ್ರಮಿಸಿದ್ದ ಶ್ರೀಯುತರು ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್‌ನ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಶ್ರೀಯುತರು 1967ರಲ್ಲಿ 4ನೇ ವಿಧಾನಸಭೆಗೆ ಬೀದರ್ ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

**ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ಸಜ್ಜನ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.**

**09. ಶ್ರೀ ಶ್ರೀ ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿ**

**ಉಡುಪಿಯ ಅಷ್ಟ ಮಠಗಳಲ್ಲಿ ಒಂದಾದ ಪೇಜಾವರ ಮಠದ ಮುಖ್ಯಸ್ಥರಾಗಿದ್ದ ರಾಷ್ಟ್ರ ಸಂತ ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿರವರು ದಿನಾಂಕ: 29.12.2019 ರಂದು ನಿಧನ ಹೊಂದಿರುತ್ತಾರೆ.**

1931ರ ಏಪ್ರಿಲ್, 27ರಂದು ಉಡುಪಿ ಜಿಲ್ಲೆಯ ರಾಮಕುಂಜ ಗ್ರಾಮದಲ್ಲಿ ನಾರಾಯಣಾಚಾರ್ಯ–ಕಮಲಮ್ಮ ದಂಪತಿಯ ಪುತ್ರರಾಗಿ ಜನಿಸಿದ್ದ ಶ್ರೀಯುತರು ತಮ್ಮ 7ನೇ ವಯಸ್ಸಿನಲ್ಲಿ ದೀಕ್ಷೆಯನ್ನು ಪಡೆದು ಅಧೋಕ್ಷಜ ತೀರ್ಥರ ಸಂಸ್ಥಾನದ ಉತ್ತರಾಧಿಕಾರಿಯಾಗಿ ಪೇಜಾವರ ಮಠದ 33ನೇ ಯತಿಯಾಗಿದ್ದ ಶ್ರೀಗಳು ಅಪೂರ್ವ ಸಾಮಾಜಿಕ ಸೇವೆ, ಧಾರ್ಮಿಕ ಹೋರಾಟಗಳ ಮೂಲಕ ರಾಷ್ಟ್ರ ಮಾತ್ರವಲ್ಲದೆ ವಿಶ್ವಮಾನ್ಯತೆಗಳಿಸಿದ್ದವರಾಗಿದ್ದರು. ಶ್ರೀಗಳ ಆದರ್ಶ ಜೀವನದೊಂದಿಗೆ ಇಡೀ ಜಗತ್ತನ್ನೇ ಅಪ್ಪಿಕೊಳ್ಳುವ ಅಂತ:ಕರಣವಿದ್ದ ಅಸಾಧಾರಣ ವ್ಯಕ್ತಿತ್ವ ಅವರದ್ದಾಗಿತ್ತು.

ಗಾಂಧೀಜಿಯವರ ಹೋರಾಟ, ಸಿದ್ಧಾಂತಗಳು ಹಾಗೂ ಮೌಲ್ಯಗಳು ಶ್ರೀಗಳನ್ನು ಆಕರ್ಷಿಸಿದ್ದವು. ಹರಿಜನರನ್ನು ಅಸ್ಪೃಶ್ಯತೆಯಿಂದ ಮೇಲೆತ್ತಿ, ಸಮಾಜದ ಮುಖ್ಯವಾಹಿನಿಗೆ ತರಬೇಕೆಂಬುದು ಅವರ ಅಚಲ ನಿಲುವಾಗಿತ್ತು. ಶ್ರೀಗಳು ನಕ್ಸಲ್ ಪೀಡಿತ ಪ್ರದೇಶದ ಜನರಿಗೆ ಮೂಲಭೂತ ಸೌಲಭ್ಯ, ಮತಾಂತರ ತಡೆ, ನೆರೆಪೀಡಿತರಿಗೆ ಸೂರು ಹೀಗೆ ಜನತಾ ಜನಾರ್ದನರ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ತಮ್ಮ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂರನೆಯ ಪರ್ಯಾಯದ ಅವಧಿಯಲ್ಲಿ ರಂಜಾನ್ ಆಚರಣೆಯನ್ನು ಉಡುಪಿಯ ರಾಜಾಂಗಣದಲ್ಲಿ ನಡೆಸಿ ಸರ್ವಧರ್ಮ ಸಮಭಾವಕ್ಕೆ ಮೇಲ್ಪಂಕ್ತಿ ಹಾಕಿಕೊಟ್ಟ ಶ್ರೀಗಳು ಮಠದ ಹಿಂದೂ ಶಿಷ್ಯರೊಂದಿಗೆ ಮುಸ್ಲಿಂ–ಕ್ರೈಸ್ತ ಹಾಗೂ ಇತರೆಲ್ಲ ಧರ್ಮಗಳವರೊಂದಿಗೂ ಹಾರ್ಧಿಕವಾದ ಸಂಬಂಧವನ್ನು ವಿಸ್ತರಿಸಿಕೊಂಡಿದ್ದರು. ಇವೆಲ್ಲವುಗಳ ಜೊತೆಗೆ ಸರಳತೆಯ ಸಾಕಾರಮೂರ್ತಿಯಾದ ಶ್ರೀಗಳನ್ನು 'ರಾಷ್ಟ್ರ ಸಂತ' ಎಂಬ ಕೀರ್ತಿಗೆ ಭಾಜನರಾಗಿಸಿದೆ.

ಶ್ರೀಗಳು ಅಪ್ಪಟ ಮನುಷ್ಯತ್ವದಿಂದಲೇ ಜಾತಿ, ಪಂಗಡ, ಧರ್ಮಕ್ಕೆ ಅತೀತರಾದವರು. ನಡೆ–ನುಡಿಯಲ್ಲಿ ಮಾನವೀಯ ಧರ್ಮವನ್ನೇ ಉಸಿರಾಡಿದವರು. ಮಾನವ ಕುಲವೊಂದೇ ಎಂದು ಅನುಷ್ಠಾನದ ಮೂಲಕ ಸಾರಿದವರು. ಶ್ರೀಗಳ ಕೃಪಾಕಟಾಕ್ಷದಲ್ಲಿ ಬೆಳೆದ ಅಸಂಖ್ಯ ವಿದ್ಯಾರ್ಥಿಗಳು ನಾಡಿನ ದೇಶದ ಗಡಿದಾಟಿ ಪ್ರಪಂಚದ ಮೂಲೆ ಮೂಲೆಗಳಲ್ಲೂ ನಾನಾ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸುತ್ತಾ ಶ್ರೀಗಳ ಛಾಪು ಪ್ರತಿಫಲಿಸುವಂತೆ ನೋಡಿಕೊಂಡು ಶ್ರೀಗಳ ಹಾಗೂ ಮಠದ ಹೆಸರನ್ನು ಎಲ್ಲೆಡೆ ಪಸರಿಸಿದ್ದಾರೆ.

**ಶ್ರೀಗಳ ನಿಧನದಿಂದಾಗಿ ರಾಜ್ಯ ಹಾಗೂ ರಾಷ್ಟ್ರವು ಶ್ರೇಷ್ಠ ಸಂತ ಹಾಗೂ ಯತಿ ಶ್ರೇಷ್ಠರನ್ನು ಕಳೆದುಕೊಂಡು ರಾಷ್ಟ್ರದ ಇತಿಹಾಸದಲ್ಲಿ ವಾಮನ ಮೂರ್ತಿ ತ್ರಿವಿಕ್ರಮಶಕ್ತಿಯ ಮಹತ್ವದ ಅಧ್ಯಾಯವೊಂದು ಕೊನೆಗೊಂಡಂತಾಗಿದೆ.**

## 10. ಕದ್ರಿ ಗೋಪಾಲನಾಥ್

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯ

**ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಹಾಗೂ ಸ್ಯಾಕ್ಸೋಫೋನ್‌ವಾದನದಲ್ಲಿ ವಿಶ್ವ ಪ್ರಸಿದ್ಧರಾದ ಶ್ರೀ ಕದ್ರಿ ಗೋಪಾಲನಾಥ್‌ಅವರು ದಿನಾಂಕ 11.10.2019 ರಂದು ನಿಧನ ಹೊಂದಿರುತ್ತಾರೆ.**

1949ರ ಡಿಸೆಂಬರ್, 6ರಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಜಿಪಮೂಡ ಊರಿನಲ್ಲಿ ಜನಿಸಿದ್ದ ಶ್ರೀಯುತರು ನಾಗಸ್ವರ ಶಿಕ್ಷಣವನ್ನು ಹಾಗೂ ಕರ್ನಾಟಕ ಶಾಸ್ತ್ರೀಯ ಸಂಗೀತ ಶಿಕ್ಷಣವನ್ನು ಪಡೆದಿದ್ದು ವೃತ್ತಿಯಲ್ಲಿ ಕಲಾವಿದರಾಗಿದ್ದರು.

1978ರಲ್ಲಿ ಮಂಗಳೂರು ಆಕಾಶವಾಣಿಯಲ್ಲಿ ತಮ್ಮ ಮೊದಲ ಸಂಗೀತ ಕಚೇರಿ ಕಾರ್ಯಕ್ರಮವನ್ನು ಪ್ರಾರಂಭಿಸಿದ ಶ್ರೀಯುತರು ಆಕಾಶವಾಣಿಯ 'ಎ' ಟಾಪ್ ಶ್ರೇಣಿಯ ಕಲಾವಿದರೆಂದು ಪ್ರಸಿದ್ಧಿ ಪಡೆದು, ಕರ್ನಾಟಕ, ಆಂಧ್ರ, ತಮಿಳುನಾಡು, ಕೇರಳ ರಾಜ್ಯಗಳಲ್ಲಿಯೇ ಅಲ್ಲದೆ ಉತ್ತರ ಭಾರತದ ಪ್ರತಿಷ್ಠಿತ ಉತ್ಸವ, ವೇದಿಕೆಗಳಲ್ಲಿ, ರಾಯಲ್ ಆಲ್ಬರ್ಟ್ ಹಾಲ್‌ನಲ್ಲಿ, ಬರ್ಲಿನ್ ಸಂಗೀತೋತ್ಸವ,

ಮೆಕ್ಸಿಕೋದ ಸೆರ್ವಾಂಟಿನೋ ಉತ್ಸವ, ಲಂಡನ್‌ನ ಪ್ರೋಮೆನಾಡೊ, ಪ್ಯಾರಿಸ್‌ನ ಹೈಲ್ ಫೆಸ್ಟಿವಲ್ ಮುಂತಾದ ವಿಶ್ವ ಉತ್ಸವ ವೇದಿಕೆಗಳಲ್ಲಿ ಸ್ಯಾಕ್ಸೋಫೋನ್ ಸಂಗೀತ ಕಚೇರಿಗಳನ್ನು ನಡೆಸಿರುತ್ತಾರೆ. ಅಲ್ಲದೆ, ಚೆನ್ನೈನ ನಾರದ ಗಾನಸಭಾದಲ್ಲಿ 400 ಮಂದಿ ಕಲಾವಿದರೊಡನೆ ನಡೆಸಿಕೊಟ್ಟ ಕಾರ್ಯಕ್ರಮದಿಂದ ತಮಗೆ ಬಂದ ಲಕ್ಷಾಂತರ ಹಣವನ್ನು ಕಾರ್ಗಿಲ್ ಯುದ್ಧ ನಿಧಿಗಾಗಿ ಸಮರ್ಪಿಸಿದ ಹೆಗ್ಗಳಿಕೆ ಇವರದ್ದಾಗಿತ್ತು.

ಶ್ರೀಯುತರು ಪದ್ಮಶ್ರೀ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ತಮಿಳುನಾಡು ಸರ್ಕಾರದ ಕಲೈಮಾಮಣಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳಲ್ಲದೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ಖ್ಯಾತ ಸ್ಯಾಕ್ಸೋಫೋನ್ ವಾದನಕಾರ ಹಾಗೂ ಸಂಗೀತ ಶಾಸ್ತ್ರಜ್ಞರೊಬ್ಬರನ್ನು ಕಳೆದುಕೊಂಡಂತಾಗಿದೆ.**

## 11. ಡಾ: ಎಂ. ಚಿದಾನಂದಮೂರ್ತಿ

**ಕನ್ನಡದ ಹಿರಿಯ ಲೇಖಕರು, ಘನ ವಿದ್ವಾಂಸರು, ಅಪ್ರತಿಮ ಸಂಶೋಧಕರು, ಭಾಷಾ ಶಾಸ್ತ್ರಜ್ಞರು ಹಾಗೂ ಕನ್ನಡಪರ ಹೋರಾಟಗಾರರಾದ ಡಾ: ಎಂ. ಚಿದಾನಂದಮೂರ್ತಿಯವರು ದಿನಾಂಕ: 11.01.2020ರಂದು ನಿಧನ ಹೊಂದಿರುತ್ತಾರೆ.**

1931ರ ಮೇ, 10ರಂದು ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಹಿರೆಕೋಗಲೂರ್ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಸ್ನಾತಕೋತ್ತರ ಪದವೀಧರರಾಗಿದ್ದು, 1957ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಯುವರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ, 1960–69 ರವರೆಗೆ ಮೈಸೂರಿನ ಮಾನಸ ಗಂಗೋತ್ರಿಯ ಸ್ನಾತಕೋತ್ತರ ಕನ್ನಡ ವಿಭಾಗದ ಅಧ್ಯಾಪಕರಾಗಿ, 'ಶಿಕಾಗೋ' ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ, ಕನ್ನಡ ರೀಡರ್ ಆಗಿ ನಂತರ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಕನ್ನಡ ಸಂಶೋಧನ ಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡುವುದರ ಮೂಲಕ ಕನ್ನಡದ ನಾಡು, ನುಡಿ, ಸಂಸ್ಕೃತಿ, ಸಾಹಿತ್ಯ ಮುಂತಾದ ರಂಗಗಳಲ್ಲಿ ಅದ್ವಿತೀಯ ಸಾಧನೆ ಮಾಡಿರುತ್ತಾರೆ. ಕರ್ನಾಟಕ ಇತಿಹಾಸದ ಕುರಿತು ಹಲವಾರು ಪುಸ್ತಕಗಳನ್ನು ಪ್ರಕಟಿಸಿ ಹಲವಾರು ವಿದ್ಯಾರ್ಥಿಗಳಿಗೆ ಅವರ ಸಂಶೋಧನೆಯಲ್ಲಿ ಮಾರ್ಗದರ್ಶನವನ್ನು ನೀಡಿದ ಶ್ರೀಯುತರು ರಾಷ್ಟ್ರದ ವಿವಿಧ ಭಾಷೆಗಳಿಗೆ ಮತ್ತು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನೇಕ ವಿದೇಶಿ ಭಾಷೆಗಳಿಗೆ ಕನ್ನಡದ ಸತ್ವವನ್ನು ಪರಿಚಯಿಸಿದ ಅಂತರಾಷ್ಟ್ರೀಯ ಪ್ರತಿಭೆಯಾಗಿದ್ದರು. ಜನಸಾಮಾನ್ಯರಲ್ಲಿ ಕನ್ನಡತನ ಬೆಳೆಸಲು, ಕನ್ನಡ ಸಂಸ್ಕೃತಿ ನಮ್ಮ ಹೆಮ್ಮೆ ಎಂಬ ಕಿರುಹೊತ್ತಿಗೆಯನ್ನು ಪ್ರಕಟಿಸಿದ್ದರು. ಕನ್ನಡ–ಕನ್ನಡಿಗ–ಕರ್ನಾಟಕ ಎಂಬ ಅಂಕಿ ಅಂಶಗಳನ್ನು ಒಳಗೊಂಡ ಪುಸ್ತಕವನ್ನು ಹೊರತಂದರು. ಇದು ಕನ್ನಡಿಗರ ಸಂವಿಧಾನ ಎಂಬ ಪ್ರಶಂಸೆಗೆ ಪಾತ್ರವಾಯಿತು.

ಶ್ರೀಯುತರು ಕನ್ನಡ ಭಾಷೆ ಹಾಗೂ ಕರ್ನಾಟಕದ ಇತಿಹಾಸ ಕುರಿತು ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದಾರಲ್ಲದೆ, 1982ರಲ್ಲಿ ಗೋಕಾಕ್ ವರದಿಯ ಜಾರಿಗೆ ಕನ್ನಡ ಸಾಹಿತಿಗಳು, ಕಲಾವಿದರು ಹೋರಾಟ ನಡೆಸಿ ಅದೇ ವರ್ಷದ ಏಪ್ರಿಲ್ 13ರಂದು ಕನ್ನಡ ಚಳುವಳಿಯ ನಾಯಕರಾಗಿ ಗೋಕಾಕ್ ಚಳುವಳಿಯಲ್ಲಿ ತೋರಿದ ಕ್ರಿಯಾಶೀಲತೆ, ಹಿರಿಯರನ್ನು ಕಿರಿಯರನ್ನು ಉತ್ತೇಜಿಸಿ ತಮ್ಮೊಂದಿಗೆ ಕೊಂಡೊಯ್ದು ಕನ್ನಡ ಚಳವಳಿಗೆ ಹೊಸ ರೂಪ ವರ್ಚಸ್ಸು ಗೌರವಗಳನ್ನು ತಂದ ಕೀರ್ತಿಗೆ ಭಾಜನರಾಗಿದ್ದರು. ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ್ದ ಕೀರ್ತಿ ಇವರದ್ದಾಗಿದೆ.

ಶ್ರೀಯುತರು ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿಗಳಲ್ಲದೆ ಇತರೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಕನ್ನಡ ಸಾರಸ್ವತ ಲೋಕದ ಒಬ್ಬ ಹಿರಿಯ ಸಾಹಿತಿ, ಸಂಶೋಧಕ ಹಾಗೂ ಬಹುಮುಖ ವ್ಯಕ್ತಿತ್ವದ ಪ್ರತಿಭೆಯನ್ನು ಕಳೆದುಕೊಂಡಂತಾಗಿದೆ.**

## 12. ಹೊಸ್ತೋಟ ಮಂಜುನಾಥ ಭಾಗವತ

**ಯಕ್ಷ ಋಷಿ, ಯಕ್ಷಗಾನ ಪಾರಂಗತರಾದ ಹೊಸ್ತೋಟ ಮಂಜುನಾಥ ಭಾಗವತ ಅವರು ದಿನಾಂಕ:07.01.2020 ರಂದು ನಿಧನ ಹೊಂದಿರುತ್ತಾರೆ.**

1940ರ ಫೆಬ್ರವರಿ, 15ರಂದು ಶಿರಸಿ ತಾಲ್ಲೂಕಿನ ಹನುಮಂತಿ ಹೊಸ್ತೋಟದಲ್ಲಿ ಜನಿಸಿದ್ದ ಶ್ರೀಯುತರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ ಕೆರೆಮನೆ ಶಿವರಾಮ ಹೆಗಡೆ, ಮಹಾಬಲ ಹೆಗಡೆ ಕೆರೆಮನೆ ಅವರ ಗರಡಿಯಲ್ಲಿ ಯಕ್ಷಗಾನಕ್ಕೆ ಗೆಜ್ಜೆಯನ್ನು ಕಟ್ಟಿದ್ದರು.

ಶ್ರೀಯುತರನ್ನು ಕೊಡಗಿಪಾಲ ಶಿವರಾಮ ಹೆಗಡೆಯವರು ಯಕ್ಷಗಾನ ರಂಗಕ್ಕೆ ಪರಿಚಯಿಸಿದರು. ಉತ್ತರಕನ್ನಡ ಮತ್ತು ಮಲೆನಾಡಿನಲ್ಲಿ ಯಕ್ಷಗಾನದ ಸರ್ವಾಂಗ ಶಿಕ್ಷಣದ ಗುರುವಾಗಿ, ಭಾಗವತರಾಗಿ ತಮ್ಮದೇ ಆದ ಕೊಡುಗೆ ನೀಡಿ ಏಕವ್ಯಕ್ತಿ ಗುರುಕುಲವೆಂಬ ಪ್ರಶಂಸೆಗೆ ಪಾತ್ರರಾಗಿದ್ದರು. ಶ್ರೀಯುತರು ಯಕ್ಷಗಾನದ ಭಾಗವತಿಕೆ, ನೃತ್ಯ, ಮದ್ದಲೆ, ಚಂಡೆವಾದನ, ವೇಷಗಾರಿಕೆ, ಅರ್ಥಗಾರಿಕೆ ಎಲ್ಲಾ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಭಾಗಗಳಲ್ಲಿಯು ಪರಿಣಿತರಾಗಿದ್ದ ಶ್ರೀಯುತರು ಯಕ್ಷಗಾನ ಪಠ್ಯ ರಚನಾ ಸಮಿತಿಯ ಅಧ್ಯಕ್ಷರಾಗಿದ್ದರು. ಶ್ರೀಯುತರು ರಾಮಾಯಣ, ಮಹಾಭಾರತ, ಭಾಗವತ ಹಾಗೂ ಇನ್ನಿತರ ಪುರಾಣಗಳನ್ನು ಆದರಿಸಿದ 300ಕ್ಕೂ ಹೆಚ್ಚು ಪ್ರಸಂಗಗಳನ್ನು ರಚಿಸಿ 'ಯಕ್ಷ ಋಷಿ' ಎಂದೇ ಖ್ಯಾತಿಯನ್ನು ಹೊಂದಿದ್ದರು.

ಯಕ್ಷಗಾನ ರಂಗಕ್ಕೆ ಅನನ್ಯ ಕೊಡುಗೆ ಸಲ್ಲಿಸಿದ್ದ ಶ್ರೀಯುತರು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಯಕ್ಷಗಾನ ಅಕಾಡೆಮಿಯ ಪಾರ್ತಿಸುಬ್ಬ ಪ್ರಶಸ್ತಿ, ಕರ್ನಾಟಕ ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ, ಜಾನಪದ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿಗಳಲ್ಲದೆ ಇತರೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಯಕ್ಷಗಾನ ಭೀಷ್ಮರನ್ನು ಕಳೆದುಕೊಂಡಂತಾಗಿದೆ.**

**<u>13. ಡಾ: ಚೆನ್ನಣ್ಣ ವಾಲೀಕಾರ</u>**

**ಹಿರಿಯ ಸಾಹಿತಿ, ಪ್ರಗತಿಪರ ಚಳವಳಿ ನಾಯಕ, ಚಿಂತಕ ಡಾ:ಚೆನ್ನಣ್ಣ ವಾಲೀಕಾರ ಅವರು ದಿನಾಂಕ: 24.11.2019 ರಂದು ನಿಧನ ಹೊಂದಿರುತ್ತಾರೆ.**

1943ರ ಏಪ್ರಿಲ್ 6 ರಂದು ಚಿತ್ತಾಪುರ ತಾಲ್ಲೂಕಿನ ಶಂಕರವಾಡಿ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಎಂ.ಎ., ಪಿ.ಹೆಚ್.ಡಿ ಪದವೀಧರರಾಗಿದ್ದು, ವೃತ್ತಿಯಲ್ಲಿ ಶಿಕ್ಷಕರಾಗಿದ್ದರು.

ಶ್ರೀಯುತರು ದಲಿತ ಬಂಡಾಯ ಲೇಖಕರಲ್ಲಿ ಅಗ್ರಗಣ್ಯರಾಗಿದ್ದು, 1970ರ ದಶಕದಲ್ಲಿ ಬಂಡಾಯದ ಆರಂಭದ ದಿನಗಳಲ್ಲಿ ನಾಡಿನಾದ್ಯಂತ ಸಂಚರಿಸಿ ಜಾಗೃತಿಯನ್ನು ಮೂಡಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದರಲ್ಲದೆ, ಶೋಷಿತ ವರ್ಗದ ಅನ್ಯಾಯದ ವಿರುದ್ಧ ಧ್ವನಿ ಎತ್ತುತ್ತಿದ್ದ ಇವರನ್ನು **ಚೆನ್ನಣ್ಣ ಹಿರಿಯಣ್ಣ** ಎಂದು ಕರೆಯುತ್ತಿದ್ದರು. 1979ರಂದು ಧರ್ಮಸ್ಥಳದಲ್ಲಿ ಆಯೋಜಿಸಲಾಗಿದ್ದ ಅಖಿಲ ಭಾರತ ಸಮ್ಮೇಳನದಲ್ಲಿ ದಲಿತ ಸಾಹಿತ್ಯಗೋಷ್ಠಿ ಏರ್ಪಡಿಸಲು ಬಹು ದೊಡ್ಡ ಹೋರಾಟವನ್ನೇ ನಡೆಸಿ ಗೆಲುವನ್ನು ಸಾಧಿಸಿದ ಹೆಗ್ಗಳಿಕೆ ಇವರದ್ದಾಗಿದೆ.

ಶ್ರೀಯುತರು ಖ್ಯಾತ ಸಾಹಿತಿಯಾಗಿ, ಕವಿಯಾಗಿ, ನಾಟಕಕಾರರಾಗಿ, ಶಿಕ್ಷಕರಾಗಿ, ಪ್ರಾಧ್ಯಾಪಕರಾಗಿ, ಸೇವೆಯನ್ನು ಸಲ್ಲಿಸಿರುವುದಲ್ಲದೆ ಅನೇಕ ಚಳುವಳಿಗಳಲ್ಲಿ ಭಾಗವಹಿಸಿದ್ದು, ದಲಿತರ ನೋವಿನ ಮೂಕ ಸಂವೇದನೆಗೆ ಗಟ್ಟಿ ಧ್ವನಿಯಾಗಿದ್ದರು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಯುತರ ನಿಧನದಿಂದಾಗಿ ಹಿರಿಯ ಬಹುಮುಖ ಪ್ರತಿಭೆಯ ಕನ್ನಡದ ಹಿರಿಯ ಸಾಹಿತಿಯೊಬ್ಬರನ್ನು ಕಳೆದುಕೊಂಡಂತಾಗಿದೆ.**

**14. ಪ್ರೊ.ಎಸ್.ಎಸ್.ಕಟಗಿಹಳ್ಳಿಮಠ**

**ಖ್ಯಾತ ಕೃಷಿ ವಿಜ್ಞಾನಿ, ಶತಾಯುಶಿ ಪ್ರೊ:ಎಸ್.ಎಸ್.ಕಟಗಿಹಳ್ಳಿಮಠ ಅವರು ದಿನಾಂಕ 02.12.2019 ರಂದು ನಿಧನ ಹೊಂದಿರುತ್ತಾರೆ.**

1919ರ ಮೇ 4ರಂದು ಹಾವೇರಿ ಜಿಲ್ಲೆಯ ಗುತ್ತಲ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಬಿ.ಎಸ್ಸಿ. ಪದವೀಧರರಾಗಿದ್ದು, ಕೀಟ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ವೃತ್ತಿಯಲ್ಲಿ ಉಪನ್ಯಾಸಕರಾಗಿದ್ದರು.

1945ರಲ್ಲಿ ಪುಣೆ ಕೃಷಿ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಅತ್ಯುತ್ತಮವಾದ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಿದ್ದರು, 1974ರಲ್ಲಿ ನಿವೃತ್ತಿಯಾದ ನಂತರ 1975 ರಿಂದ 1989ರವರೆಗೆ ಕೃಷಿ ವಾರ್ತೆ, ಕನ್ನಡ ಮಾಸಪತ್ರಿಕೆ ಸಂಪಾದಕರಾಗಿದ್ದರಲ್ಲದೆ, ಕೃಷಿ ಅಭಿವೃದ್ಧಿ, ಕೃಷಿ ಶಿಕ್ಷಣ, ತೋಟಗಾರಿಕಾ ಅಭಿವೃದ್ಧಿ, ಅರಣ್ಯ ಸಂಶೋಧನೆ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಸ್ವಯಂ ಪ್ರೇರಿತರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ರಾಜ್ಯಾದ್ಯಂತ ವಿವಿಧ ಪ್ರಯೋಗಗಳನ್ನು ನಡೆಸಿದ್ದರು.

ಇನ್ಸ್‌ಟಿಟ್ಯೂಟ್ ಆಫ್ ಅಗ್ರಿಕಲ್ಚರಲ್ ಟೆಕ್ನಾಲಜೀಸ್‌ನ ಆಜೀವ ಸದಸ್ಯರಾಗಿದ್ದ ಶ್ರೀಯುತರು ಬಂಜರು ಭೂಮಿಯನ್ನು ವಿಭಿನ್ನ ರೀತಿಯ ತೋಟಗಳಾಗಿ ಪರಿವರ್ತಿಸುವಲ್ಲಿ ತಾಂತ್ರಿಕ ಮತ್ತು ವೈಜ್ಞಾನಿಕ ಸಲಹೆಯನ್ನು ನೀಡುತ್ತಿದ್ದರು. ಶ್ರೀಯುತರು 96ನೇ ವಯಸ್ಸಿನವರೆಗೆ ಕೃಷಿ ತಾಂತ್ರಿಕ ಸಲಹೆಗಾರರಾಗಿ ಕಾರ್ಯನಿರ್ವಹಿಸಿದ್ದರು. ಜಮ್ನಾಲಾಲ್ ಬಜಾಜ್ ರಾಷ್ಟ್ರೀಯ ಪ್ರಶಸ್ತಿ ಪಡೆದ ಮೊದಲ ಕನ್ನಡಿಗರಾಗಿದ್ದ ಇವರಿಗೆ ಕೃಷಿ ಕ್ಷೇತ್ರದಲ್ಲಿನ ಅಪಾರವಾದ ಸೇವೆಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ಕೃಷಿ ವಿಜ್ಞಾನಿಯನ್ನು ಕಳೆದುಕೊಂಡಂತಾಗಿದೆ.**

**15. ಡಾ: ನವರತ್ನ ಶ್ರೀನಿವಾಸ ರಾಜಾರಾಮ್**

**ಅಮೇರಿಕದ ನಾಸಾ ಸಂಸ್ಥೆಯ ನಿವೃತ್ತ ವಿಜ್ಞಾನಿ ಹಾಗೂ ಲೇಖಕರಾದ ಡಾ: ನವರತ್ನ ಶ್ರೀನಿವಾಸ ರಾಜಾರಾಮ್ ಅವರು ದಿನಾಂಕ 11.12.2019 ರಂದು ನಿಧನ ಹೊಂದಿರುತ್ತಾರೆ.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1943ರಲ್ಲಿ ಮೈಸೂರಿನಲ್ಲಿ ಜನಿಸಿದ್ದ ಶ್ರೀಯುತರು ಇಂಜಿನಿಯರಿಂಗ್ ಪದವೀಧರರಾಗಿದ್ದು, ಪುಣೆಯ ಖಾಸಗಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ನಂತರ ಅಮೇರಿಕಾದ ಇಂಡಿಯಾನಾ ವಿಶ್ವವಿದ್ಯಾಲಯದಲ್ಲಿ ಗಣಿತಶಾಸ್ತ್ರದಲ್ಲಿ ಪಿ.ಹೆಚ್.ಡಿ ಪದವಿಯನ್ನು ಹೊಂದಿ, ಸುಮಾರು ಎರಡು ದಶಕಗಳ ಕಾಲ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ಅಮೇರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ನಾಸಾದಲ್ಲಿ ವಿಜ್ಞಾನಿಯಾಗಿ ಸೇವೆ ಸಲ್ಲಿಸಿದ ಬಳಿಕ ಭಾರತೀಯ ಇತಿಹಾಸ, ಸಂಸ್ಕೃತಿ ಕುರಿತು ಆಳವಾದ ಅಧ್ಯಯನ ಮಾಡಿ ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಪುಸ್ತಕಗಳನ್ನು ಬರೆದ ಶ್ರೀಯುತರು ಇತಿಹಾಸ, ರಾಷ್ಟ್ರೀಯತೆ, ಸಾಹಿತ್ಯ ಹಾಗೂ ವಿಜ್ಞಾನದಲ್ಲಿ ಹೆಚ್ಚು ಆಸಕ್ತಿಯನ್ನು ಹೊಂದಿದ್ದರು. ಕೃತಕ ಬುದ್ಧಿಮತ್ತೆಯನ್ನು ಹೇಗೆ ಬಳಸಿಕೊಳ್ಳಬಹುದೆಂಬ ಕುರಿತು ಅಧ್ಯಯನ ಮಾಡಿ ಈ ಬಗ್ಗೆ ಹಲವಾರು ಪುಸ್ತಕಗಳನ್ನು ಬರೆಯುವ ಮೂಲಕ ಹೆಚ್ಚು ಪ್ರಸಿದ್ಧರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ಒಬ್ಬ ಲೇಖಕ, ಸಂಶೋಧಕ ಹಾಗೂ ಹಿರಿಯ ವಿಜ್ಞಾನಿಯನ್ನು ಕಳೆದುಕೊಂಡಂತಾಗಿದೆ.**

**<u>16. ಚಂದ್ರಕಾಂತ ಕರದಳ್ಳಿ</u>**

**ಹಿರಿಯ ಸಾಹಿತಿಗಳಾದ ಚಂದ್ರಕಾಂತ ಕರದಳ್ಳಿ ಅವರು ದಿನಾಂಕ:19.12.2019 ರಂದು ನಿಧನ ಹೊಂದಿರುತ್ತಾರೆ.**

1952ರ ಆಗಸ್ಟ್, 25 ರಂದು ಯಾದಗಿರಿ ಜಿಲ್ಲೆಯ ಶಹಾಪುರದಲ್ಲಿ ಜನಿಸಿದ್ದ ಶ್ರೀಯುತರು ಬಿ.ಇಡಿ.,ಎಂ.ಎ., ಪದವಿ ಹಾಗೂ ಸ್ನಾತಕೋತ್ತರ ಪದವೀಧರರಾಗಿದ್ದು, ವೃತ್ತಿಯಲ್ಲಿ ಶಿಕ್ಷಕರಾಗಿದ್ದರು.

ಬಡ ಕುಟುಂಬದಲ್ಲಿ ಜನಿಸಿದ್ದ ಶ್ರೀಯುತರು 33 ವರ್ಷಗಳ ಕಾಲ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದು, ಮಕ್ಕಳ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ 47ಕ್ಕೂ ಹೆಚ್ಚು ಶಿಶುಕಥೆ, ಮಕ್ಕಳ ಪ್ರವಾಸ ಕಥನ, ನಾಟಕ, ಕಥಾ ಸಂಕಲನಗಳನ್ನು ಬರೆದಿರುವ ಶ್ರೀಯುತರು ಶಿಶು ಸಾಹಿತಿಗಳೆಂದೆ ಪ್ರಖ್ಯಾತರಾಗಿದ್ದರು. ಆನೆ ಬಂತು ಆನೆ, ನಲಿದಾಡು ಬಾ ನವಿಲೆ, ಉಪ್ಪಿನಗೊಂಬೆ, ಮಾಯದ ಗೊಂಬೆ ಸಗರಾದ್ರಿ ಚಾರಣ, ಕಾಡು ಕನಸಿನ ಬೀಡಿಗೆ ಇವರ ಪ್ರಮುಖ ಕೃತಿಗಳಾಗಿವೆ. ಶಹಾಪುರದಲ್ಲಿ ನಡೆದ ಪ್ರಥಮ ಸಾಹಿತ್ಯ ಸಮ್ಮೇಳನ ಹಾಗೂ ಯಾದಗಿರಿ ಜಿಲ್ಲಾ ಎರಡನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಯುತರು ರಾಷ್ಟ್ರಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ, ಉತ್ತಮ ಶಿಕ್ಷಕ ರಾಜ್ಯ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲ ಸಾಹಿತ್ಯ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳಲ್ಲದೆ ಇತರೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ಶಿಶು ಸಾಹಿತಿ ಹಾಗೂ ಶ್ರೇಷ್ಠ ಶಿಕ್ಷಕರೊಬ್ಬರನ್ನು ಕಳೆದುಕೊಂಡಂತಾಗಿದೆ.**

<u>**17. ಡಾ:ಆರ್.ಸತ್ಯನಾರಾಯಣ**</u>

**ಪದ್ಮಶ್ರೀ ಪುರಸ್ಕೃತ ನೃತ್ಯ ವಿದ್ವಾಂಸ ಹಾಗೂ ಖ್ಯಾತ ಸಂಗೀತ ಶಾಸ್ತ್ರಜ್ಞರಾಗಿದ್ದ ಡಾ:ಆರ್.ಸತ್ಯನಾರಾಯಣ ಅವರು ದಿನಾಂಕ: 16.01.2020ರಂದು ನಿಧನ ಹೊಂದಿರುತ್ತಾರೆ.**

1927ರ ಮೇ, 9ರಂದು ಮೈಸೂರಿನಲ್ಲಿ ಜನಿಸಿದ್ದ ಶ್ರೀಯುತರು ರಸಾಯನ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿಯನ್ನು ಪಡೆದಿದ್ದರಲ್ಲದೆ ಸಂಗೀತ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಂಪಿ, ಮೈಸೂರು, ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯಗಳಿಂದ ಡಿ.ಲಿಟ್ ಪದವಿಯನ್ನು ಪಡೆದಿದ್ದು, ವೃತ್ತಿಯಲ್ಲಿ ಕಲಾವಿದರಾಗಿದ್ದರು.

1949 ರಿಂದ 1984ರವರೆಗೆ ಶ್ರೀಯುತರು ಶಾರದಾ ವಿಲಾಸ ಕಾಲೇಜಿನಲ್ಲಿ ರಸಾಯನ ಶಾಸ್ತ್ರ ಮತ್ತು ಕರ್ನಾಟಕ ಸಂಗೀತವನ್ನು ವಿದ್ಯಾರ್ಥಿಗಳಿಗೆ ಕಲಿಸುತ್ತಾ, ನೃತ್ಯ ಮತ್ತು ಸಂಗೀತದ ಕುರಿತು ಸಂಸ್ಕೃತದಲ್ಲಿ ಹಲವಾರು ಗ್ರಂಥಗಳನ್ನು ರಚಿಸಿದ್ದರು. ಭಾರತ ಸರ್ಕಾರದ ವತಿಯಿಂದ ಏರ್ಪಡಿಸಲಾಗುತ್ತಿದ್ದ ಸಂಗೀತ ಉತ್ಸವಗಳಲ್ಲಿ ಮತ್ತು ಅಂತರಾಷ್ಟ್ರೀಯ ಗೋಷ್ಠಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಶ್ರೀಯುತರು ಭಾರತೀಯ ಸಂಗೀತ ಕಾಂಗ್ರೆಸಿನ ಅಧ್ಯಕ್ಷರಾಗಿಯು ಸೇವೆಯನ್ನು ಸಲ್ಲಿಸಿದ್ದರು.

ಶ್ರೀಯುತರು ಸಂಗೀತ ಕ್ಷೇತ್ರಕ್ಕೆ ನೀಡಿದ ಅನನ್ಯ ಕೊಡುಗೆಯಿಂದಾಗಿ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ಖ್ಯಾತ ಸಂಗೀತಶಾಸ್ತ್ರಜ್ಞ, ನೃತ್ಯ ವಿಶಾರದರೊಬ್ಬರನ್ನು ಕಳೆದುಕೊಂಡಂತಾಗಿದೆ.**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(5) 17/02/2020/12:40/ಎಸ್‌ಪಿಆರ್/ಜಿಆರ್**

**(ಸಭಾಪತಿಯವರ ಉಪಸ್ಥಿತಿ)**

.

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಸಂತಾಪ ಸೂಚನೆಯನ್ನು ಓದಿದ್ದೀರಿ.

**ಸಭಾಪತಿಯವರು:–** ಯಾರ ಹೆಸರನ್ನು ಬಿಡಬೇಕೆನ್ನುವುದನ್ನು ನೀವು ತಿಳಿಸಿ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಹೆಸರು ಬಿಡುವುದರ ಬಗ್ಗೆ ಅಲ್ಲ ಇನ್ನೂ ಕೆಲವು ಹೆಸರುಗಳನ್ನು ಸೇರಿಸಬೇಕೆಂದು ನಾನು ಹೇಳುತ್ತೇನೆ. ಮಾನ್ಯ ಸಭಾನಾಯಕರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರುಗಳು ಸಂತಾಪ ಸೂಚನೆಯ ಮೇಲೆ ಮಾತನಾಡುತ್ತಾರೆ. ಆದರೆ ನಾವು ಸುಮ್ಮನೆ ಕುಳಿತಿರುತ್ತೇವೆ. ಸಂತಾಪ ಸೂಚನೆಯ ಮೇಲೆ ನಾವು ಏಕೆ ಮಾತನಾಡಿಲ್ಲವೆಂದು ಸದನದ ಹೊರಗಡೆ ಹೋದಾಗ ನಮ್ಮನ್ನು ಕೇಳುತ್ತಾರೆ. ಈ ಕಾರಣಕ್ಕಾಗಿ ಕೇವಲ ಇಬ್ಬರು ಮಾತನಾಡಬೇಕೆಂದು ಹಾಗೂ ಬೇರೆ ಸದಸ್ಯರುಗಳಿಗೆ ಮಾತನಾಡಲು ಅವಕಾಶವಿಲ್ಲವೆಂದು ತಾವು ತಿಳಿಸಿ. ತಾವು ಇಷ್ಟೆಲ್ಲಾ ಸಂತಾಪ ಸೂಚನೆಯನ್ನು ಓದುವುದರ ಬದಲಾಗಿ ಮೃತರ ಹೆಸರುಗಳನ್ನು ಹೇಳಿ ಸಭೆಯ ಮುಂದೆ ಮಂಡಿಸಿದಾಗ ಅದು ದಾಖಲೆಗೆ ಹೋಗುತ್ತದೆ. ಪತ್ರಿಕೆಯವರಿಗೆ ಸಂತಾಪ ಸೂಚನೆಯ ಪ್ರತಿಯನ್ನು ನೀಡಿದರೆ, ಅವರು ಅದನ್ನು ಮುದ್ರಿಸುತ್ತಾರೆ. ಯಾರು ಯಾರಿಗೆ ಸಂತಾಪವನ್ನು ವ್ಯಕ್ತಪಡಿಸಬೇಕೆಂಬುದರ ಬಗ್ಗೆ ನೀವು ಮಾನದಂಡವೊಂದನ್ನು ಹಾಕಬೇಕು.

**ಸಭಾಪತಿಯವರು:–** ಈ ಕಾರಣಕ್ಕಾಗಿ ಯಾರ ಹೆಸರನ್ನು ಬಿಡಬೇಕೆಂದು ನಾನು ಈಗಾಗಲೇ ಕೇಳಿದ್ದೇನೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಯಾರ ಹೆಸರನ್ನು ಬಿಡಬೇಕೆಂದು ನಾವುಗಳು ಯಾರೂ ಸಹ ಹೇಳುವುದಿಲ್ಲ. ತಮ್ಮದು ಒಳ್ಳೆಯ ಕಥೆಯಾಯಿತಲ್ಲ. ಸಂತಾಪ ಸೂಚನೆಯಲ್ಲಿ ಯಾರ ಹೆಸರನ್ನು ಸೇರಿಸಬೇಕೆಂದು ಹೇಳುವಂತಹ ವಿಚಾರವಾಗಿದೆ. ಇದರಲ್ಲಿ ಯಾರ ಹೆಸರನ್ನೂ ಬಿಡುವ ಪ್ರಶ್ನೆಯೇ ಇಲ್ಲ. ಉಡುಪಿಯ ಸ್ವಾಮೀಜಿಯವರಾದ ಶ್ರೀ ಶ್ರೀ ಶ್ರೀ ವಿಶ್ವೇಶ ತೀರ್ಥ ಸ್ವಾಮಿಜೀಯವರೊಂದಿಗೆ ನಮ್ಮ ಒಡನಾಟವಿತ್ತು. ಅವರ ಬಗ್ಗೆ ಮಾತನಾಡಬೇಕೆಂದು ನನಗೆ ಆಸೆ ಇರುತ್ತದೆ. ಆದರೆ ಇಲ್ಲಿ ನಿಭಂಧನೆ ಇದೆ. ಆದರೆ ಮಾನ್ಯ ಸಭಾನಾಯಕರು ಹಾಗೂ ಮಾನ್ಯ ವಿರೋಧ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಕ್ಷದ ನಾಯಕರುಗಳು ಮಾತನಾಡಿದ ಮೇಲೆ ನಾವುಗಳು ಯಾರೂ ಸಹ ಮಾತನಾಡುವಂತಿಲ್ಲ. ಗದಗಿನ ತೊಂಟದಾರಾಧ್ಯರವರು ಮೃತಪಟ್ಟಿದ್ದಾರೆ. ಅವರಿಗೆ ತಾವು ಸಂಚಾಪವನ್ನು ಸೂಚಿಸಿಲ್ಲ. ಅದೇ ರೀತಿಯಾಗಿ ಇಳಕಲ್‌ನ ಮಹಾಂತೇಶ್ ಸ್ವಾಮಿಗಳ ಬಗ್ಗೆ ಸಂತಾಪ ಸೂಚನೆಯಲ್ಲಿ ನಮೂದಿಸಿಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಈ ಹಿಂದಿನ ಸದನದಲ್ಲಿ ಮಂಡಿಸಿದ ಸಂತಾಪ ಸೂಚನೆಯಲ್ಲಿ ಅವರ ಹೆಸರನ್ನು ನಮೂದಿಸಲಾಗಿದೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಸಂಪ್ರದಾಯವೊಂದನ್ನು ಹಾಕಿಕೊಳ್ಳಬೇಕು. ಇಲ್ಲವಾದರೆ ಯಾರು ಯಾರು ನಿಧನರಾಗಿದ್ದಾರೆ ಅವರುಗಳಿಗೆ ಸಂತಾಪವನ್ನು ಸೂಚಿಸಲು ಮಾನ್ಯ ಸದಸ್ಯರು ಅಂತಹವರುಗಳ ಹೆಸರನ್ನು ತಮಗೆ ಕಳುಹಿಸುವಂತೆ ನಿಮ್ಮ ಕಛೇರಿಯವರಿಗೆ ತಿಳಿಸಿ. ನಿಮ್ಮ ಗಮನಕ್ಕೆ ಬಂದಾಗ, ಅವರ ಹೆಸರುಗಳನ್ನು ತಾವು ಪರಿಗಣಿಸಿ.

**ಸಭಾಪತಿಯವರು:-** ಸರಿ, ಆಗಬಹುದು.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಆಡಳಿತ ಹಾಗೂ ವಿರೋಧ ಪಕ್ಷದ ಇಬ್ಬರು ಸದಸ್ಯರಿಗೆ ಮೃತರ ಬಗ್ಗೆ ಮಾತನಾಡಲು ಅವಕಾಶ ನೀಡಿ. ಇಲ್ಲವಾದರೆ ನೀವೇ ಮಾತನಾಡಿ, ಎಲ್ಲಾ ಸದಸ್ಯರುಗಳು ಮಾತನಾಡಿದ್ದು ಆಗಿದೆ ಎಂದು ತಾವೇ ಎದ್ದು ನಿಂತು ಒಂದು ನಿಮಿಷದ ಸಂತಾಪವನ್ನು ಸೂಚಿಸಿದರೆ ಆಯಿತು. ಮಾನ್ಯ ಸಭಾನಾಯಕರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರುಗಳು ಮಾತನಾಡಬೇಕೆಂದು ಕಡ್ಡಾಯವಿಲ್ಲ.

**ಸಭಾಪತಿಯವರು:-** ಸಭೆ ಒಪ್ಪಿದರೆ ತಮಗೂ ಸಹ ಮಾತನಾಡಲು ಅವಕಾಶ ನೀಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ,...

**ಶ್ರೀ ರಘು ಆಚಾರ್:-** ಮಾನ್ಯ ಸಭಾಪತಿಯವರೇ, ಅವರು ಏನೇನು ಹೇಳಬೇಕೋ ಅದನ್ನೆಲ್ಲಾ ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭೇಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಇಬ್ರಾಹಿಂರವರು ಮಾತನಾಡಿದ ಉದ್ದೇಶವೇನೆಂದರೆ, question of time ಇದು ಬಹಳ ಪ್ರಮುಖವಾದುದು. ಎಲ್ಲಾ ಸದಸ್ಯರುಗಳಿಗೆ ಮಾತನಾಡಬೇಕೆಂಬ ಆಸೆ ಇದೆ.

**ಡಾ॥ ವೈ.ಎ.ನಾರಾಯಣ ಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹಾಲಿ ಇರುವ ಪದ್ಧತಿಯು ಸರಿಯಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, 17 ಗಣ್ಯ ವ್ಯಕ್ತಿಗಳ ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ. ಇದಕ್ಕೆ ನಾನು ಅನುಮೋದನೆ ನೀಡುತ್ತೇನೆ. ಪದ್ಮವಿಭೂಷಣ ಪುರಸ್ಕೃತ ಕರ್ನಾಟಕ ರಾಜ್ಯದ ಮಾಜಿ ರಾಜ್ಯಪಾಲರಾಗಿದ್ದ ಶ್ರೀ ತ್ರಿಲೋಕಿ ನಾಥ್ ಚತುರ್ವೇದಿರವರ ನಿಧನದ ಬಗ್ಗೆ ಉಲ್ಲೇಖ ಮಾಡಲಾಗಿದೆ. ದಿವಂಗತ ಚತುರ್ವೇದಿರವರು ಒಬ್ಬ ಆದರ್ಶ ರಾಜಕಾರಣಿಯಾಗಿದ್ದು ದೂರಗಾಮಿ ಚಿಂತನೆಗಳನ್ನು ಹೊಂದಿದ್ದರು. 2002 ನೇ ಇಸವಿಯಿಂದ 2007 ರ ವರೆಗೆ ಕರ್ನಾಟಕ ರಾಜ್ಯದ ರಾಜ್ಯಪಾಲರಾಗಿ ಹಾಗೂ 2004 ನೇ ಇಸವಿಯಲ್ಲಿ ಕೇರಳ ರಾಜ್ಯದ ರಾಜ್ಯಪಾಲರಾಗಿ ಅತ್ಯಂತ ಯೋಜನಾಬದ್ಧವಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ ಎನ್ನುವ ಗೌರವಕ್ಕೆ ಪಾತ್ರರಾಗಿದ್ದವರು. ಅತೀ ಗಣ್ಯರಿಗೆ ದೊರೆಯುವ ಅನೇಕ ಗೌರವಗಳು ಅವರಿಗೆ ದೊರೆತಿವೆ. ಒಬ್ಬ ಹಿರಿಯ ಮುತ್ಸದ್ದಿ, ಸರಳ ರಾಜಕಾರಣಿಯನ್ನು ಕಳೆದುಕೊಂಡ ಅನುಭವಗಳು ನಮಗಾಗಿವೆ. ಸಾರ್ವಜನಿಕ ಜೀವನದಲ್ಲಿ ಬಹಳ ಅಪರೂಪಕ್ಕೆ ದೊರೆಯುವ ಪದ್ಮವಿಭೂಷಣ ಪ್ರಶಸ್ತಿಗೂ ಸಹ ಅವರು ಭಾಜನರಾಗಿದ್ದರು. ದಿವಂತರಿಗೆ ಸೂಚಿಸುವ ಸಂತಾಪ ಸೂಚನೆ ಮಂಡನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಘನತೆವೆತ್ತ ವಿಧಾನ ಪರಿಷತ್ತಿನ ಮಾಜಿ ಸಭಾಪತಿಗಳಾಗಿದ್ದ ಶ್ರೀ ಡಿ.ಮಂಜುನಾಥರವರ ನಿಧನದ ಬಗ್ಗೆ ಮಾನ್ಯ ಸಭಾಪತಿಯವರು ಉಲ್ಲೇಖ ಮಾಡಿದ್ದಾರೆ. ಈ ಹಿಂದೆ ಜನತಾ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಅವರು ಸೇವೆಯನ್ನು ಸಲ್ಲಿಸಿದ್ದಾರೆ. ಆ ನಂತರ ಮೂರು ಬಾರಿ ವಿಧಾನ ಸಭೆಯ ಸದಸ್ಯರಾಗಿ 1983ರಲ್ಲಿ ವಿಧಾನ ಪರಿಷತ್ತಿಗೆ ನಾಮ ನಿರ್ದೇಶಿತ ಸದಸ್ಯರಾಗಿ ಅವರು ಕರ್ತವ್ಯ ನಿರ್ವಹಿಸುವ ಬಗ್ಗೆ ಉಲ್ಲೇಖಿಸಲಾಗಿದೆ. ಅವರು 1987 ರಲ್ಲಿ ವಿಧಾನ ಪರಿಷತ್ತಿನ ಸಭಾಪತಿಯಾಗಿ ಕಾರ್ಯನಿರ್ವಹಿಸಿದ ರೀತಿ ಮತ್ತು ಶ್ರೀಯುತರು ಅತ್ಯಂತ ಜನಪರ ಕಾಳಜಿಯನ್ನು ಹೊಂದಿದ್ದರು. ಅವರು ಬಹಳ ಅಪರೂಪದ ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿದ್ದ ಹಿರಿಯ ರಾಜಕಾರಣಿ ಎನ್ನುವ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರಣಕ್ಕೆ ಒಬ್ಬ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಹ ಅನುಭವ ಈ ನಾಡಿಗೆ ಆಗಿದೆ ಎನ್ನುವಂತಹ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ.

ಡಾ॥ ವೈಜನಾಥ್ ಪಾಟೀಲ್‌ರವರ ಬಗ್ಗೆಯೂ ಸಹ ಮಾನ್ಯ ಸಭಾಪತಿಯವರು ಸಂತಾಪ ಸೂಚನೆಯನ್ನು ಮಂಡಿಸಿದ್ದಾರೆ. ಶ್ರೀಯುತರು ಹೋರಾಟಕ್ಕೆ ಮತ್ತೊಂದು ಹೆಸರಾಗಿದ್ದರು. ಅವರು ಯಾವುದೇ ರಾಜಕಾರಣದಲ್ಲಿ ಹೇಗೆ ಇರಲಿ, ಎಲ್ಲಾ ಜನಪರ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದರು. ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿ ಮತ್ತು ಹೈದರಾಬಾದ್-ಕರ್ನಾಟಕದ ಹೋರಾಟ ಸಮಿತಿಯ ಅಧ್ಯಕ್ಷರಾಗಿ ಅವರು ಕೆಲಸ ನಿರ್ವಹಿಸಿದ್ದಾರೆ. ಸಂವಿಧಾನದ ಅನುಚ್ಛೇದ 371–ಜೆ ಅಡಿ ವಿಶೇಷ ಸ್ಥಾನಮಾನಗಳನ್ನು ದೊರೆಕಿಸಿ ಕೊಡುವುದರಲ್ಲಿ ಅವರು ಪ್ರಮುಖ ಪಾತ್ರವನ್ನು ವಹಿಸಿದ್ದರು. ಅದರಲ್ಲೂ ವಿಶೇಷವಾಗಿ ರಾಮಕೃಷ್ಣ ಹೆಗಡೆಯವರ ಸಚಿವ ಸಂಪುಟದಲ್ಲಿ ತೋಟಗಾರಿಕೆ ಸಚಿವರಾಗಿ ಹಾಗೂ ಶ್ರೀ ಹೆಚ್.ಡಿ.ದೇವೇಗೌಡರವರ ಸಚಿವ ಸಂಪುಟದಲ್ಲಿ ನಗರಾಭಿವೃದ್ಧಿ ಸಚಿವರಾಗಿ ಸೇವೆ ಸಲ್ಲಿಸಿರುವುದನ್ನು ನಾವು ಗಮನಿಸಬೇಕು. ರಾಜಕಾರಣದಲ್ಲಿರುವ ಅಪರೂಪದ ಹೋರಾಟಕ್ಕೆ ಅವರು ಒಬ್ಬ ಮಾದರಿ ಮನುಷ್ಯರಾಗಿದ್ದರು. ಬದುಕಿನ ಕೊನೆಯ ದಿನಗಳವರೆಗೂ ಕೂಡ ಹೋರಾಟವನ್ನು ಕೈಗೊಂಡ ದಿವಂಗತರಿಗೆ ಅತ್ಯಂತ ಗೌರವಪೂರ್ಣವಾಗಿ ಸಂತಾಪಕ್ಕೆ ನಾನು ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಜಿ.ಮಾದಪ್ಪರವರ ಬಗ್ಗೆಯೂ ಸಹ ಮಾನ್ಯ ಸಭಾಪತಿಯವರು ಸಂತಾಪ ಸೂಚನೆಯಲ್ಲಿ ಉಲ್ಲೇಖಿಸಿದ್ದಾರೆ. ಅವರು ಈ ಹಿಂದೆ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಅವರು ಸ್ವಾತಂತ್ರ್ಯ ಹೋರಾಟಗಾರ ಮತ್ತು ಹಿರಿಯ ಸಮಾಜವಾದಿಯಾಗಿ ಕೆಲಸಗಳನ್ನು ನಿರ್ವಹಿಸಿದ್ದಾರೆ. ಅವರು ತಮ್ಮದೇ ಆದ ಖಾಸಗಿ ವೃತ್ತಿಯನ್ನು ಮಾಡಿದ್ದರೂ ಸಹ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು ಎನ್ನುವ ಗೌರವಕ್ಕೆ ಅವರು ಪಾತ್ರರಾಗಿದ್ದರು. ಶ್ರೀಯುತರ ನಿಧನಕ್ಕೆ ಸಂತಾಪವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಮಲ್ಲಾರಿಗೌಡ ಶಂಕರಗೌಡ ಪಾಟೀಲ್‌ರವರು ಮೂರು ಬಾರಿ ವಿಧಾನಸಭಾ ಸದಸ್ಯರಾಗಿ ಹಾಗೂ ಶ್ರೀ ಎಸ್.ಬಂಗಾರಪ್ಪರವರ ಸಚಿವ ಸಂಪುಟದಲ್ಲಿ ಜಲ ಸಂಪನ್ಮೂಲ ಸಚಿವರಾಗಿ ಕೆಲಸ ನಿರ್ವಹಿಸಿದ್ದಾರೆ. ಅವರು ಹಲವಾರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ ಮಹಾನ್ ಗೌರವಕ್ಕೆ ಪಾತ್ರರಾಗಿದ್ದಾರೆ. ಶ್ರೀಯುತರ ನಿಧನಕ್ಕೆ ನಾನು ಸಂತಾಪವನ್ನು ವ್ಯಕ್ತಪಡಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಅಮರನಾಥ ಶೆಟ್ಟಿರವರ ಬಗ್ಗೆ ಸಂತಾಪ ಸೂಚನೆಯಲ್ಲಿ ಉಲ್ಲೇಖಿಸಲಾಗಿದೆ. ಶ್ರೀಯುತರು 7ನೇ, 8ನೇ ಮತ್ತು 10ನೇ ವಿಧಾನ ಸಭೆಯ ಸದಸ್ಯರಾಗಿ ಆಯ್ಕೆಯಾಗಿದ್ದರು. ರಾಜ್ಯದ ಪ್ರವಾಸೋದ್ಯಮ ಮತ್ತು ಧಾರ್ಮಿಕ ದತ್ತಿ ಸಚಿವರಾಗಿ ಕೆಲಸಗಳನ್ನು ನಿರ್ವಹಿಸಿದ್ದಾರೆ. ಮೂಡಬಿದ್ರೆ ಎಂದರೆ ಜೈನಕಾಶಿ ಎಂದು ಅಲ್ಲಿನ ಜನಸಾಮಾನ್ಯರು ಹೇಳುತ್ತಾರೆ. ಇಂತಹ ಕ್ಷೇತ್ರದಲ್ಲಿ ಬಹಳ ಗುರುತರವಾದ ಕೆಲಸಗಳನ್ನು ಮಾಡಿದ್ದಾರೆ. ಶ್ರೀ ರಾಮಕೃಷ್ಣ ಹೆಗಡೆಯವರ ಸಚಿವ ಸಂಪುಟದಲ್ಲಿ ಬಹಳ ನಿಕಟವರ್ತಿಯಾಗಿದ್ದುಕೊಂಡು ದಕ್ಷಿಣ ಕನ್ನಡ ಜಿಲ್ಲೆಗೆ ಅಪಾರವಾದ ಅಭಿವೃದ್ಧಿಯ ಕೆಲಸಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಸಹ ನಂಬಿದ್ದ ಸಿದ್ಧಾಂತಕ್ಕೆ ಅವರು ಬೆನ್ನು ತಿರುಗಿಸಿದವರು ಅಲ್ಲ. ಶ್ರೀಯುತರ ಬಗ್ಗೆ ನಮಗೆ ಬಹಳ ಕಾಳಜಿ ಮತ್ತು ಗೌರವ ಇದೆ. ಅವರು ಪ್ರತಿನಿಧಿಸುವ ಪಕ್ಷ ಗೆಲ್ಲಬಹುದು ಅಥವಾ ಸೋಲಬಹುದು ಆದರೆ ಅವರು ಒಬ್ಬ ವ್ಯಕ್ತಿ ಹಾಗೂ ಶಕ್ತಿಯಾಗಿದ್ದರು. ಸೈದ್ಧಾಂತಿಕವಾಗಿ ನಂಬಿರುವ ವಿಚಾರಗಳಿಗೆ ಅವರು ಬದ್ಧರಾಗಿ ಕೆಲಸ ಮಾಡುವುದನ್ನು ನಾವು ಕಂಡಿದ್ದೇವೆ. ಕೊನೆಯ ಕ್ಷಣದವರೆಗೂ ಸಹ ತಮ್ಮ ತತ್ವ ಮತ್ತು ಸಿದ್ಧಾಂತಕ್ಕೆ ಬದ್ಧರಾದ ಕೆಲವೇ ರಾಜಕಾರಣಿಗಳಲ್ಲಿ ಶ್ರೀಯುತರು ಒಬ್ಬರಾಗಿದ್ದರು. ಇವರಿಗೆ ಗೌರವಪೂರ್ಣವಾದ ಸಾಂತ್ವನವನ್ನು ಹೇಳಲಿಕ್ಕೆ ಈ ಮೂಲಕ ಇಷ್ಟಪಡುತ್ತೇನೆ.

ಶ್ರೀ ನಾರಾಯಣರಾವ್ ಗೋವಿಂದ ತರಳೆರವರ ನಿಧನಕ್ಕೆ ಸಂತಾಪ ಸೂಚನೆಯಲ್ಲಿ ಉಲ್ಲೇಖಿಸಲಾಗಿದೆ. ಶ್ರೀಯುತರು ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದರು. ಅವರು ಬೆಳಗಾವಿ ಜಿಲ್ಲೆಯ ಹಿರಿಯ ರಾಜಕಾರಣಿರಾಗಿ ಕೆಲಸಗಳನ್ನು ಮಾಡಿದ್ದರು. ಸೌಜನ್ಯ ಮತ್ತು ಸಜ್ಜನ ನಡವಳಿಕೆಗೆ ಹೆಸರುವಾಸಿಯಾಗಿದ್ದರು. ಸರ್ವರನ್ನೂ ಪ್ರೀತಿಸುವ ಉದಾತ್ತ ಗುಣಗಳು ಅವರಲ್ಲಿ ಅಕಡಗೊಂಡಿವೆ.

ಶ್ರೀ ಚಂದ್ರಕಾಂತ ಗುರುಪಾದಪ್ಪ ಸಿಂದೋಲ್‌ರವರ ನಿಧನಕ್ಕೆ ಮಾನ್ಯ ಸಭಾಪತಿಯವರು ಸಂತಾಪ ಸೂಚನೆಯಲ್ಲಿ ಉಲ್ಲೇಖ ಮಾಡಿದ್ದಾರೆ. ಶ್ರೀಯುತರು ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದರು. ಶ್ರೀಯುತರು ಬುಡಕಟ್ಟು ಜನಾಂಗದವರ ಏಳಿಗೆಗಾಗಿ ಅವಿರತವಾಗಿ ಶ್ರಮಿಸಿದ್ದರು. ಸಾಮಾನ್ಯವಾಗಿ ಜನಪ್ರತಿನಿಧಿಗಳು ಹಾಗೂ ರಾಜಕಾರಣಿಗಳು ಒಟ್ಟಾರೆ ವಿಚಾರದ ಬಗ್ಗೆ ಗಮನವಹಿಸಿದರೆ, ಶ್ರೀಯುತರು ವಿಶೇಷವಾಗಿ ಅಂಗವಿಕಲರು, ಅನಾಥರು, ಕಾರ್ಮಿಕರು ಹಾಗೂ ಧ್ವನಿಇಲ್ಲದ ವರ್ಗಗಳನ್ನು ಕಂಡಾಗ ತಮ್ಮ ವಿಶೇಷವಾದ ಕಾಳಜಿಯನ್ನು ತೋರಿಸಿ ಕೆಲಸ ನಿರ್ವಹಿಸಿದ್ದರು. ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ಸಜ್ಜನ ರಾಜಕಾರಣಿಯೊಬ್ಬರನ್ನು ನಾವು ಕಳೆದುಕೊಂಡಂತಾಗಿದೆ. ಈ ಕಾರಣಕ್ಕಾಗಿ ಶ್ರೀಯುತರ ನಿಧನದ ಸಂತಾಪಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೂಜ್ಯರಾದ ಶ್ರೀ ಶ್ರೀ ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿಯವರ ನಿಧನಕ್ಕೆ ಸಂತಾಪ ಸೂಚನೆಯಲ್ಲಿ ಉಲ್ಲೇಖಿಸಲಾಗಿದೆ. ಅವರನ್ನು ರಾಷ್ಟ್ರ ಸಂತ ಎಂಬುದಾಗಿ ಉಲ್ಲೇಖಿಸಲಾಗಿದೆ. ಗಾಂಧೀಜಿಯವರ ಹೋರಾಟ, ಸಿದ್ಧಾಂತಗಳು ಹಾಗೂ ಜನಪರವಾದ ಮೌಲ್ಯಗಳನ್ನು ಶ್ರೀಯುತರು ಮೈಗೂಡಿಸಿಕೊಂಡಿದ್ದರು. ಆಶ್ಚರ್ಯದ ವಿಷಯವೇನೆಂದರೆ, ಅಸ್ಪೃಶ್ಯತೆಯ ಬಗ್ಗೆ ಅವರಿಗೆ ಬಹಳ ಸ್ಪಷ್ಟವಾದ ನಿಲುವು ಇತ್ತು. ಸಮಾಜದಿಂದ ಅಸ್ಪೃಶ್ಯತೆಯನ್ನು ಹೋಗಲಾಡಿಸಲೇ ಬೇಕು ಎನ್ನುವ ಕಾರಣಕ್ಕಾಗಿ ಅವರು ದಲಿತರ ಕೇರಿಗಳಲ್ಲಿ ಪಾದಯಾತ್ರೆ ಮಾಡಿ ಸಂಚಾರ ಮಾಡಿದರು ಹಾಗೂ ಜನಜಾಗೃತಿಯನ್ನು ಮೂಡಿಸುವಂತಹ ಕೆಲಸಗಳನ್ನು ಮಾಡಿದರು. ಅದರಲ್ಲಿ ವಿಶಿಷ್ಟತೆ ಏನೆಂದರೆ, ಆಗಿನ ಕಾಲದಲ್ಲಿ ದಲಿತರ ಕೇರಿಯಲ್ಲಿ ಪ್ರವೇಶ ಮಾಡಿದ್ದಾರೆ ಎನ್ನುವ ಕಾರಣಕ್ಕೆ ಪೇಜಾವರ ಶ್ರೀಗಳಿಗೆ ಬಹಳ ದೊಡ್ಡ ವಿರೋಧಗಳು ವ್ಯಕ್ತವಾಗಿದ್ದವು. ದಲಿತರ ಕೇರಿಗೆ ಹೋಗಿದ್ದರಿಂದ ಅವರಿಗೆ ಹಾಗೂ ಅವರ ವ್ಯವಸ್ಥೆಗೆ ತೊಂದರೆಯಾಗುತ್ತದೆ ಎನ್ನುವ ವಿಚಾರಗಳು ಬಂದವು. ಆಗ ಪರಮ ಪೂಜ್ಯ ಪೇಜಾವರು ಶ್ರೀಗಳವರು ಅಂತಹ ಎಲ್ಲಾ ವಿಚಾರಗಳನ್ನು ನಿರ್ಲಕ್ಷಿಸಿ ದಲಿತರ ಕೇರಿಗಳಿಗೆ ಪಾದ ಯಾತ್ರೆಗಳನ್ನು ಮಾಡಿ ಜನಜಾಗೃತಿ ಮೂಡಿಸುವಂತಹ ಕೆಲಸಗಳನ್ನು ಮಾಡುತ್ತಿದ್ದರು. ಶ್ರೀಗಳವರನ್ನು ವಾಮನ ಮೂರ್ತಿ ಎಂಬುದಾಗಿ ಉಲ್ಲೇಖ ಮಾಡಲಾಗಿದೆ. ಅವರದು ಸಣ್ಣ ದೇಹ. ಅವರು ತಮ್ಮ 89 ನೇ ವಯಸ್ಸಿನಲ್ಲಿ ದಿವಂಗತರಾದರು. ಅವರ 90 ನೇ ವರ್ಷದ ಹುಟ್ಟುಹಬ್ಬವನ್ನು ಬಹಳ ದೊಡ್ಡದಾಗಿ ಆಚರಣೆ ಮಾಡಬೇಕೆಂದು ಇಡೀ ಜಿಲ್ಲೆ ಹಾಗೂ ರಾಜ್ಯ ಒಟ್ಟಾಗಿ ಬೇರೆ ಬೇರೆ ಸಮಿತಿಗಳನ್ನು ಮಾಡುವಂತಹ ಸಂದರ್ಭದಲ್ಲಿ ಅವರು ನಮ್ಮನ್ನು ಅಗಲಿದ್ದಾರೆ. ಶ್ರೀಯುತರು ತಮ್ಮ 88 ನೇ ವಯಸ್ಸಿನಲ್ಲಿ ತಮ್ಮ ಶಿಷ್ಯರೊಂದಿಗೆ ಕೆರೆಯಲ್ಲಿ ಈಜಾಡುತ್ತಿದ್ದರು. ಶ್ರೀಯುತರು ತಮ್ಮ 88 ನೇ ವಯಸ್ಸಿನಲ್ಲಿ ಈಜಾಡುತ್ತಿರುವುದು ಸಾಧ್ಯವೇ ಎಂದು ನಾವು ಪುನಃ ಪುನಃ ನೋಡಿದ್ದೇವೆ. ಹೀಗೆ ಅವರ ಜೀವನವೇ ಅದ್ಭುತ ಎಂಬುದಾಗಿ ನಮಗನ್ನಿಸುತ್ತಿತ್ತು. ಕಾಲಿಗೆ ಚಕ್ರ ಕಟ್ಟಿಕೊಂಡು ಶ್ರೀಗಳವರು ಓಡಾಡುತ್ತಾರೆಂದು ನಾವುಗಳೆಲ್ಲಾ ಅವರಿಗೆ ಹೇಳುತ್ತಿದ್ದೆವು.

(06) 17-02-2020/12-50/ಕೆಹೆಚ್(ಎಲ್ಎಂ)-ಎಂಡಿ(ವಿಕೆ)

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು):-** ಶ್ರೀಗಳು ಪೀಠಾರೋಹಣ ಮಾಡುವ ಸಮಾರಂಭದಲ್ಲಿ ಹೊಸ ವಿಷಯಗಳು ಚರ್ಚೆಗೆ ಬರುತ್ತಿದ್ದವು. ಆಗ ಆ ಸಮಾರಂಭದಲ್ಲಿ ನೆರೆದಿದ್ದ ಒಬ್ಬ ಸಭಿಕರು ಶ್ರೀಗಳೇ 8ನೇ ವಯಸ್ಸಿನಲ್ಲಿ ತಾವು ಸನ್ಯಾಸವನ್ನು ತೆಗೆದುಕೊಂಡಿದ್ದೀರಿ, ನಿಮ್ಮ ತಾರುಣ್ಯ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬದುಕು, ವಯಸ್ಸು ಇವೆಲ್ಲವನ್ನೂ ಕಂಡಾಗ ಸನ್ಯಾಸವನ್ನು ತೆಗೆದುಕೊಂಡಿದ್ದು ತಮಗೆ ಸರಿಯೆನಿಸುತ್ತದೆಯೇ ಎಂದು ಪೇಜಾವರ ಮಠದ ಸ್ವಾಮಿಗಳನ್ನು ಅವರು ಪ್ರಶ್ನೆ ಮಾಡುತ್ತಾರೆ. ಹಾಗೆಯೇ ಇನ್ನೊಬ್ಬ ಸಭಿಕರು ಎರಡು ವರ್ಷದ ಕೆಳಗೆ ತಾವು 8ನೇ ವಯಸ್ಸಿನಲ್ಲಿ ಸನ್ಯಾಸವನ್ನು ತೆಗೆದುಕೊಂಡು 88ನೇ ವಯಸ್ಸಿನವರೆಗೂ ಪೇಜಾವರ ಮಠದ ಮುಖ್ಯಸ್ಥರಾಗಿದ್ದ ತಮಗೆ ಇದರ ಬಗ್ಗೆ ಹೇಗೆ ಅನಿಸುತ್ತಿದೆ ಎಂದು ಕೇಳುತ್ತಾರೆ. ಅದಕ್ಕೆ ಪೇಜಾವರ ಸ್ವಾಮಿಗಳು ಬಹಳ ಮುಗ್ಧತೆಯಿಂದ ಸಮಾಜದಲ್ಲಿ 2 ರೀತಿಯ ವ್ಯವಸ್ಥೆಗಳು ಇವೆ. ಉದಾಹರಣೆಗೆ, ಕೆಲವರು ಪ್ರೀತಿಸಿ ಮದುವೆಯಾಗುತ್ತಾರೆ. ಮತ್ತೆ ಕೆಲವರು ಅನಿವಾರ್ಯವಾಗಿ ಮದುವೆಯಾದ ನಂತರ ಪ್ರೀತಿಸುತ್ತಾರೆ. ಹಾಗೆಯೇ ನಾನು ಸಹ ಸಣ್ಣ ವಯಸ್ಸಿನಲ್ಲಿ ಸನ್ಯಾಸವನ್ನು ತೆಗೆದುಕೊಳ್ಳುವಾಗ ಸನ್ಯಾಸವೆಂದರೆ ಏನು ಎಂಬುದು ನನಗೆ ಗೊತ್ತಿರಲಿಲ್ಲ. ಅನಂತರ ನಾನು ಸನ್ಯಾಸದ ಬದುಕನ್ನು ಪ್ರೀತಿಸಿದ್ದರಿಂದಾಗಿ ಇಷ್ಟು ಎತ್ತರಕ್ಕೆ ಬೆಳೆಯುವುದಕ್ಕೆ ಸಾಧ್ಯವಾಯಿತು ಎಂದು ನಿರಾಳವಾಗಿ ಉತ್ತರವನ್ನು ಕೊಡುವಂತಹ ಕಲ್ಪನೆಗಳು ಅವರಲ್ಲಿತ್ತು. ಪರ್ಯಾಯ ಪೀಠಾರೋಹಣ ಮಾಡುವ ಸಂದರ್ಭದಲ್ಲಿ ನಮ್ಮ ಕಡೆಯಲ್ಲಿ ಸಾಮಾನ್ಯ ಜನರ ಮಧ್ಯೆ ತೆಗೆದುಕೊಳ್ಳುವ ದೇಣಿಗೆಯನ್ನು ಹೊರೆ ಕಾಣಿಕೆ ಎಂದು ಕರೆಯುತ್ತಾರೆ. ಈ ಹೊರೆ ಕಾಣಿಕೆಯಲ್ಲಿ ಕೆಲವರು ಅಕ್ಕಿ, ಮತ್ತೆ ಕೆಲವರು ತೆಂಗಿನಕಾಯಿ, ಇನ್ನಿತರ ಪದಾರ್ಥಗಳನ್ನು ಕೊಡುವಂತಹ ಪದ್ಧತಿ ಇದೆ. ಆ ಒಂದು ಸಂದರ್ಭದಲ್ಲಿ ನಾನು ಅಲ್ಲಿದ್ದೆ. ಕೆಲವರು ಸಾವಿರಾರು ತೆಂಗಿನಕಾಯಿಗಳನ್ನು ಕೊಡುತ್ತಾರೆ. ಕೆಲವರು ನೂರಾರು ಕೆ.ಜಿ ಅಕ್ಕಿಯನ್ನು ಕಾಣಿಕೆಯಾಗಿ ಕೊಡುತ್ತಿರುತ್ತಾರೆ. ಆ ಸಂದರ್ಭದಲ್ಲಿ ಬಾಗಿಲು ಇಲ್ಲದೆ ಇರುವಂತಹ ಒಂದು ಗುಡಿಸಿಲಿನ ಎದುರುಗಡೆ ಒಬ್ಬ ಹೆಣ್ಣು ಮಗಳು ಬಟ್ಟೆಯನ್ನು ಹಾಕದೇ ಇರುವಂತಹ ಮಗುವನ್ನು ಎತ್ತಿಕೊಂಡಿರುತ್ತಾಳೆ. ಆ ಹೆಣ್ಣು ಮಗಳು ಪೇಜಾವರ ಶ್ರೀಗಳ ಪೀಠಾರೋಹಣಕ್ಕೆ ಹೊರೆ ಕಾಣಿಕೆ ಒಟ್ಟು ಮಾಡಲಾಗುತ್ತಿದೆ, ಅದಕ್ಕೆ ನಾನು ಸಹ ಏನಾದರೂ ಕೊಡಬಹುದೇ ಎಂದು ಕೇಳುತ್ತಾಳೆ. ಆಗ ನಾನು ಕೊಡಿ ಎಂದು ಹೇಳಿದೆ. ಅವಳು ಗುಡಿಸಲಿನ ಒಳಗೆ ಹೋಗಿ 2 ತೆಂಗಿನಕಾಯಿಗಳನ್ನು ತಂದು ಕೊಡುತ್ತಾಳೆ. ಅದರಲ್ಲಿ ಒಂದು ಸೂಕ್ಷ್ಮತೆಯೇನೆಂದರೆ, ಸಾವಿರಾರು ತೆಂಗಿನಕಾಯಿಗಳನ್ನು ತೆಗೆದುಕೊಂಡು ಹೋಗುವ ವಾಹನಕ್ಕಾಗಿ ಸಾವಿರಾರು ರೂಪಾಯಿಗಳ ಹಣವನ್ನು ಕೊಡುತ್ತಾರೆ. ನನ್ನ ಹತ್ತಿರ ಎರಡು ತೆಂಗಿನಕಾಯಿಗಳಿದ್ದು, ಅದನ್ನು ತೆಗೆದುಕೊಂಡು ಹೋಗುವುದಕ್ಕೆ ನಾನು ಎಂಟಾಣೆ ಕೊಡುತ್ತೇನೆಂದು ಆ 50 ಪೈಸೆಯ ನಾಣ್ಯವನ್ನು ಅದರ ಮೇಲಿಡುತ್ತಾಳೆ. ಆ ತೆಂಗಿನಕಾಯಿಯನ್ನು ನಾನು ತೆಗೆದುಕೊಂಡು ಬಂದು ಪೇಜಾವರ ಶ್ರೀಗಳಿಗೆ ಈ ರೀತಿಯಾಗಿ ಹೇಳಿದೆ. ಉಡುಪಿಯ ಕೃಷ್ಣನಿಗೆ ಚೆಂದದ ರಥ ಮಾಡಿಕೊಟ್ಟವರು ಇದ್ದಾರೆ. ವಜ್ರದ ಕಿರೀಟ ಮಾಡಿಕೊಟ್ಟವರು ಇದ್ದಾರೆ ಮತ್ತು ಬಂಗಾರದ ತೊಟ್ಟಿಲನ್ನು ಮಾಡಿಕೊಟ್ಟವರು ಇದ್ದಾರೆ. ಇವರಿಗೆ ತಾವು ಪ್ರಸಾದದ ರೂಪದಲ್ಲಿ ಯಾವ ರೀತಿ ಆರ್ಶಿವಾದವನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತೀರೋ, ಹಾಗೆಯೇ ಎಂಟು ಅಣೆ ಅಂದರೆ 50 ಪೈಸೆ, ಎರಡು ತೆಂಗಿನಕಾಯಿಗಳನ್ನು ಕೊಟ್ಟಿರುವ ಪರಿಶಿಷ್ಟ ಜಾತಿಯ ರುಕ್ಮಿಣಿಗೂ ಕೂಡ ಅದೇ ರೀತಿಯ ಆರ್ಶಿವಾದವನ್ನು ಮಾಡಬೇಕೆಂದು ಹೇಳಿದೆ. ಆಗ ಪೇಜಾವರ ಶ್ರೀಗಳು ಆ ಹೆಣ್ಣು ಮಗಳನ್ನು ಕರೆಯಿಸಿ, ಆಕೆಗೆ ಮಂತ್ರಾಕ್ಷತೆಯನ್ನು ಕೊಡುತ್ತಾರೆ. ಹೀಗೆ ನಮ್ಮ ಪೇಜಾವರ ಶ್ರೀಗಳಿಗೆ ವಿಶಿಷ್ಟವಾದಂತಹ ಮಾನವೀಯ ಗುಣಗಳು ಇತ್ತು. ಅವರು ಯಾವಾಗಲೂ ಕೂಡ ಅದ್ಭುತವಾದಂತಹ ಯೋಚನೆಗಳನ್ನು ಮಾಡುತ್ತಿದ್ದರು. ಶ್ರೀಗಳು ಹಿಂದೂ ಧರ್ಮದ ಸರ್ವ ಶ್ರೇಷ್ಠ ಸಂತರಾದರೂ ಕೂಡ, ಅವರು ಎಲ್ಲಾ ಧರ್ಮವನ್ನು ಪ್ರೀತಿಸುತ್ತಿದ್ದರು. ಎಲ್ಲರನ್ನು ಒಂದೇ ಭಾವನೆಯಿಂದ ಗೌರವಿಸುತ್ತಿದ್ದರು. ಶ್ರೀಗಳು ರಾಮ ಜನ್ಮ ಭೂಮಿ ವಿಚಾರದಲ್ಲಿ ಬಹು ದೊಡ್ಡ ಪಾತ್ರವನ್ನು ವಹಿಸಿದವರು. ಆ ಕಾರಣಕ್ಕಾಗಿ ಕೇಂದ್ರ ಸರ್ಕಾರ ಶ್ರೀಗಳ ಶಿಷ್ಯರನ್ನು ಇವತ್ತಿನ ದಿವಸ ರಾಮ ಜನ್ಮ ಭೂಮಿಯ ಟ್ರಸ್ಟ್‌ನಲ್ಲಿ ನಿಯೋಜನೆ ಮಾಡಿದ್ದಾರೆ ಮತ್ತು ಕೇಂದ್ರ ಸರ್ಕಾರ ಶ್ರೀಗಳ ಒಟ್ಟು ಸಾಮಾಜಿಕ ಚಟುವಟಿಕೆಗೋಸ್ಕರ ಪದ್ಮ ವಿಭೂಷಣ ಪ್ರಶಸ್ತಿಯನ್ನು ಅವರ ಮರಣೋತ್ತರ ನಂತರ ಘೋಷಣೆ ಮಾಡಿರುವುದನ್ನು ನಾನು ಗಮನಿಸಿದ್ದೇನೆ. ಅದಕ್ಕಾಗಿ ಕೇಂದ್ರ ಸರ್ಕಾರಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಒಟ್ಟಾರೆಯಾಗಿ 8ನೇ ವಯಸ್ಸಿನಿಂದ 88ನೇ ವಯಸ್ಸಿನವರೆಗೆ ಇಡೀ ದೇಶದಲ್ಲಿ ದಾಪುಗಾಲು ಇಡುತ್ತಾ ಸಮಾಜದ ಎಲ್ಲಾ ಓರೆ–ಕೋರೆಗಳನ್ನು ತಿದ್ದಿದಂತಹ ಕೆಲವೇ ಸನ್ಯಾಸಿಗಳಲ್ಲಿ ಒಬ್ಬರಾದ ಪೇಜಾವರ ಶ್ರೀಗಳನ್ನು ಸಹ ಕಂಡಿದ್ದೇನೆ. ಅಂತಹ ಮಹಾನ್ ಸಂತರಿಗೆ ಸಂತಾಪ ಸೂಚನೆಯನ್ನು ವ್ಯಕ್ತಪಡಿಸಿದ್ದಕ್ಕಾಗಿ ನಾನು ಸಹಮತವನ್ನು ಕೋರುತ್ತೇನೆ.

ಕರ್ನಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಮತ್ತು ಸ್ಯಾಕ್ಸೋಫೋನ್ ವಾದನದಲ್ಲಿ ವಿಶ್ವ ಪ್ರಸಿದ್ಧರಾದಂತಹ ಶ್ರೀ ಕದ್ರಿ ಗೋಪಾಲನಾಥ್ ಅವರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದವರಾಗಿದ್ದಾರೆ. ಅವರು ನಿಧನರಾದಾಗ ನಾನು ಉಸ್ತುವಾರಿ ಮಂತ್ರಿಯಾಗಿ ಅವರಿಗೆ ಸಂತಾಪ ಸೂಚನೆಯನ್ನು ವ್ಯಕ್ತಪಡಿಸುವಂತಹ ಸಭೆಯಲ್ಲಿ ನಾನು ಭಾಗವಹಿಸಿದ್ದೆ. ನನಗೆ ಆಶ್ಚರ್ಯ ಮತ್ತು ದಿಗ್ಭ್ರಮೆಯೇನೆಂದರೆ ಪ್ರಪಂಚದ ಬಹುತೇಕ ದೇಶಗಳಲ್ಲಿ ಇವರ ಸ್ಯಾಕ್ಸೋಫೋನ್ ವಾದನಕ್ಕೆ ಅಭಿಮಾನಿಗಳಿದ್ದಾರೆ. ಚೆನ್ನೈನ ನಾರದ ಗಾನಸಭಾದಲ್ಲಿ 400 ಜನರ ಕಲಾವಿದರೊಡನೆ ನಡೆಸಿಕೊಟ್ಟ ಕಾರ್ಯಕ್ರಮ ಪ್ರಪಂಚದಲ್ಲಿ ಒಂದು ಅದ್ಭುತವಾದ ಕಾರ್ಯಕ್ರಮವೆಂದು ಅನಿಸಿತ್ತು. ಆ ಕಾರ್ಯಕ್ರಮದಲ್ಲಿ ಬಂದಂತಹ ಹಣವನ್ನು ಕಾರ್ಗಿಲ್ ಯೋಧರಿಗೆ ದಾನ ಮಾಡಿರುವುದನ್ನು ಸಹ ನಾನು ಗಮನಿಸಿದ್ದೆ. ಅಂತಹ ಹಿರಿಯರನ್ನು ಕಳೆದುಕೊಂಡು ಸಂಗೀತ ಲೋಕ ಬಡವಾಗಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಉಲ್ಲೇಖ ಮಾಡುತ್ತೇನೆ.

ಡಾ॥ ಎಂ. ಚಿದಾನಂದಮೂರ್ತಿರವರು ಕನ್ನಡದ ಹಿರಿಯ ಲೇಖಕರು, ಘನ ವಿದ್ವಾಂಸರು, ಅಪ್ರತಿಮ ಸಂಶೋಧಕರು, ಭಾಷಾ ಶಾಸ್ತ್ರಜ್ಞರು, ಜನಪರವಾಗಿ ಹೋರಾಟ ಮಾಡಿರುವ ಬಗ್ಗೆ ಇತಿಹಾಸ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದೆ. ಕನ್ನಡದ ನಾಡು, ನುಡಿ, ಸಂಸ್ಕೃತಿ, ಸಾಹಿತ್ಯ ಮುಂತಾದ ರಂಗಗಳಲ್ಲಿ ಅದ್ವಿತೀಯವಾದಂತಹ ಸಾಧನೆ ಮಾಡಿದ್ದಾರೆ ಎನ್ನುವ ಬಗ್ಗೆ ಎರಡು ಮಾತಿಲ್ಲ. ಈ ರೀತಿ ಅವರು ದೊಡ್ಡತನವನ್ನು ಬೆಳೆಸಿಕೊಂಡಿದ್ದಾರೆ. ಜನಸಾಮಾನ್ಯರಲ್ಲಿ ಕನ್ನಡತನ ಬೆಳೆಸಲು, ಕನ್ನಡ ಸಂಸ್ಕೃತಿ ಉಳಿಸುವುದಕ್ಕೆ ಅವರ ಪ್ರಕಟಣೆ, ಮಾತು, ಚಟುವಟಿಕೆ, ಮಾಹಿತಿಗಳು ಮತ್ತು ಜನಜಾಗೃತಿ ಉಂಟು ಮಾಡುವಂತಹ ರೀತಿ ಎಲ್ಲವೂ ಕೂಡ ಬಹಳ ಇಷ್ಟವಾಗಿರುವಂತಹ ವಿಚಾರವಾಗಿವೆ. ನೆಲ-ಜಲದ ಪ್ರಶ್ನೆಗಳು ಬಂದಾಗ ಚಿದಾನಂದಮೂರ್ತಿಯವರು ಸೆಟೆದು ನಿಲ್ಲುವಂತಹ ಕೆಲವೇ ಸಾಹಿತಿಗಳಲ್ಲಿ ಇವರು ಸಹ ಒಬ್ಬರಾಗಿದ್ದಾರೆ. ಇಂತಹ ಹಿರಿಯ ಸಾಹಿತಿಯನ್ನು ಕಳೆದುಕೊಂಡಿದ್ದಕ್ಕಾಗಿ ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತೇನೆ. 1982ರಲ್ಲಿ ನಡೆದ ಗೋಕಾಕ್ ಚಳುವಳಿಯ ಸಂದರ್ಭದಲ್ಲಿ ಇಡೀ ಕನ್ನಡ ಸಾಹಿತಿಗಳ ನೇತೃತ್ವವನ್ನು ವಹಿಸಿರುವಂತಹ ರೀತಿ ಬಹಳ ಸ್ಮರಣೀಯ ಎಂದು ಹೇಳಬೇಕಾಗಿದೆ. ಡಾ॥ ಚಿದಾನಂದಮೂರ್ತಿಯವರಿಗೆ ಸರಿ ಎನಿಸದ್ದನ್ನು ನೇರವಾಗಿ ಹೇಳುವಂತಹ ವಿಶಿಷ್ಟವಾದ ಮತ್ತು ಅದ್ಭುತವಾದ ಗುಣ ಅವರಲ್ಲಿತ್ತು ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೊಸ್ತೋಟ ಮಂಜುನಾಥ ಭಾಗವತರವರು ಯಕ್ಷಗಾನ ಪರಂಪರೆಯಲ್ಲಿ ಕೆರೆಮನೆ ಶಿವರಾಮ ಹೆಗಡೆ, ಮಹಾಬಲ ಹೆಗಡೆ ಕೆರೆಮನೆ ಇಂತಹ ದೊಡ್ಡ ಕಲಾವಿದರ ಪರಂಪರೆಗೆ ಸಾಕ್ಷಿಯಾಗಿ ಅವರಿಗೆ ಅವಕಾಶವನ್ನು ಕೊಟ್ಟಂತಹ ಹಿರಿಯರಾಗಿದ್ದಾರೆ. ಕೊಡಗಿಪಾಲ ಶಿವರಾಮ ಹೆಗಡೆಯಂತಹ ಮೇರು ನಟನಿಗೆ ಇವರು ಆಶ್ರಯವನ್ನು ಕೊಟ್ಟಿದ್ದಾರೆ ಎನ್ನುವಂತಹ ಮಾತುಗಳಿವೆ. ಇವರ ಮನಸ್ಸಿನಲ್ಲಿ ಕರ್ನಾಟಕದ ಯಕ್ಷಗಾನ ಕಲೆ ಕರ್ನಾಟಕದ ರಾಜ್ಯ ಕಲೆಯಾಗಿ ರೂಪುಗೊಳ್ಳಬೇಕೆಂಬ ಭಾವನೆ ಅವರಿಗೆ ಇತ್ತು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಂಡು ಯಕ್ಷಗಾನದ ಮಹಾಭಾರತದಲ್ಲಿ ಭೀಷ್ಮ ಎಂಬ ಪಾತ್ರವಿದ್ದು, ಇದು ಎಲ್ಲಾ ಪಾತ್ರಗಳಿಗಿಂತಲೂ ಬಹು ದೊಡ್ಡ ಶ್ರೇಷ್ಠ ಪಾತ್ರವೆಂದು ಹೇಳಿ ಇವರನ್ನು "ಯಕ್ಷಗಾನದ ಭೀಷ್ಮ" ಎಂದು ಕರೆಯುತ್ತಿದ್ದರು. ಇದನ್ನು ನಾವು ಈ ಸಂಧರ್ಭದಲ್ಲಿ ನೆನಪು ಮಾಡಿಕೊಳ್ಳಬೇಕು.

ಡಾ:ಚೆನ್ನಣ್ಣ ವಾಲೀಕಾರರವರು ಹಿರಿಯ ಸಾಹಿತಿ, ಪ್ರಗತಿಪರ ಚಳುವಳಿ ನಾಯಕ, ಚಿಂತಕರಾಗಿದ್ದರು. ನಾವೆಲ್ಲಾ ಭಾಷೆಯ ಮೂಲಕ ಬರಹದ ಮೂಲಕ ಸಮಾಜದಲ್ಲಿ ಹೋರಾಟಗಳನ್ನು, ಜನಜಾಗೃತಿಯನ್ನು ಉಂಟು ಮಾಡುವುದು ಪರಂಪರೆಯಾಗಿದೆ. ಆದರೆ ಕೆಲವು ಸಾಹಿತಿಗಳು, ಕೆಲವು ಕಲಾವಿದರು ಮಾತ್ರ ಧ್ವನಿ, ಹೆಜ್ಜೆ, ಗೆಜ್ಜೆ ಮತ್ತು ಸದ್ದಿನ ಮೂಲಕ ಒಂದು ರೀತಿ ಜನಜಾಗೃತಿಯನ್ನು ಉಂಟುಮಾಡಿರುವುದಕ್ಕಾಗಿ ಹೋರಾಟ ಮಾಡುವುದಕ್ಕೆ ಸಾಧ್ಯವಾಗಿದೆ. ಹಾಗಾಗಿ ಹೆಜ್ಜೆ ಮತ್ತು ಗೆಜ್ಜೆಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂಲಕ ಶೋಷಿತ ವರ್ಗಕ್ಕೆ ನ್ಯಾಯ ಕೊಟ್ಟಂತಹ ಕೆಲವೇ ವ್ಯಕ್ತಿಗಳಲ್ಲಿ ಡಾ॥ ಚೆನ್ನಣ್ಣ ವಾಲೀಕಾರ ಅವರು ಸಹ ಒಬ್ಬರು ಎಂದು ನಾನು ಉಲ್ಲೇಖ ಮಾಡಿ, ಅವರಿಗೆ ಸಂತಾಪವನ್ನು ಸೂಚಿಸುತ್ತೇನೆ.

ಪ್ರೊ.ಎಸ್.ಎಸ್.ಕಟಗಿಹಳ್ಳಿಮಠರವರು ಖ್ಯಾತ ಕೃಷಿ ವಿಜ್ಞಾನಿ, ಶತಾಯುಷಿ ಮತ್ತು ಶ್ರೇಷ್ಠವಾದಂತಹ ಕೀಟಾ ಶಾಸ್ತ್ರವನ್ನು ಅಧ್ಯಯನ ಮಾಡಿ ಪದವಿಯನ್ನು ಪಡೆದಂತಹರಾಗಿದ್ದಾರೆ. ಕೃಷಿ ವಾರ್ತೆ, ಕನ್ನಡ ಮಾಸ ಪತ್ರಿಕೆ ಸಂಪಾದಕರಾಗಿದ್ದರಲ್ಲದೆ, ಅನೇಕ ಜನಪರವಾದ ಕೆಲಸವನ್ನು ಮಾಡಿರುವಂತಹ ಹಿರಿಯರು 96ನೇ ವಯಸ್ಸಿನಲ್ಲಿ ನಿಧನರಾಗಿರುತ್ತಾರೆ. ಪೂಜ್ಯರ ನಿಧನಕ್ಕೆ ನಾನು ಸಂತಾಪವನ್ನು ವ್ಯಕ್ತಪಡಿಸುತ್ತೇನೆ.

ಡಾ:ನವರತ್ನ ಶ್ರೀನಿವಾಸ ರಾಜಾರಾಮ್‌ರವರು ಅಮೇರಿಕದ ನಾಸಾ ಸಂಸ್ಥೆಯ ನಿವೃತ್ತ ವಿಜ್ಞಾನಿ ಹಾಗೂ ಬಹು ದೊಡ್ಡ ಲೇಖಕರಾಗಿದ್ದರು. ಎಲ್ಲದಕ್ಕಿಂತ ಹೆಚ್ಚಾಗಿ ಕೃತಕ ಬುದ್ಧಿಮತ್ತೆಯನ್ನು ಹೇಗೆ ಬಳಸಿಕೊಳ್ಳಬಹುದೆಂಬ ಬಗ್ಗೆ ಅಧ್ಯಯನ ಮಾಡಿ, ಈ ಬಗ್ಗೆ ಹಲವಾರು ಪುಸ್ತಕಗಳನ್ನು ಬರೆದಂತಹ ಬಹು ದೊಡ್ಡ ಚಿಂತಕರೆಂದು ಉಲ್ಲೇಖ ಮಾಡಿ, ಇವರಿಗೆ ನಾನು ಸಂತಾಪವನ್ನು ವ್ಯಕ್ತಪಡಿಸುತ್ತೇನೆ.

ಹಿರಿಯ ಸಾಹಿತಿಗಳಾದ ಶ್ರೀ ಚಂದ್ರಕಾಂತ ಕರದಳ್ಳಿ ಇವರು ಬಡ ಕುಟುಂಬದಲ್ಲಿ ಜನಿಸಿ, 33 ವರ್ಷಗಳ ಕಾಲ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಶಿಕ್ಷಕರಾಗಿ ಸೇವೆಯನ್ನು ಸಲ್ಲಿಸಿದವರಾಗಿದ್ದಾರೆ. ರಾಷ್ಟ್ರ ಮಟ್ಟದಲ್ಲಿ ಉತ್ತಮ ಶಿಕ್ಷಕ ಎಂದು ಪ್ರಶಸ್ತಿಯನ್ನು ಪಡೆದಿರುವುದಲ್ಲದೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೂ ಸಹ ಭಾಜನರಾಗಿದ್ದಾರೆ. ಅನೇಕ ಕಥೆ, ನಾಟಕ, ಕವನ, ಕಥಾ ಸಂಕಲನಗಳನ್ನು ಬರೆದಿರುವಂತಹ ಹಿರಿಯರ ನಿಧನಕ್ಕೆ ಸಂತಾಪವನ್ನು ವ್ಯಕ್ತಪಡಿಸುತ್ತೇನೆ.

ಪದ್ಮಶ್ರೀ ಪುರಸ್ಕೃತ ನೃತ್ಯ ವಿದ್ವಾಂಸ ಹಾಗೂ ಖ್ಯಾತ ಸಂಗೀತ ಶಾಸ್ತ್ರಜ್ಞರಾಗಿರುವಂತಹ ಡಾ॥ ಆರ್.ಸತ್ಯನಾರಾಯಣರವರು ಹಂಪಿ, ಮೈಸೂರು, ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯಗಳಲ್ಲಿ ಡಿ.ಲಿಟ್ ಪದವಿಯನ್ನು ಪಡೆದಿದ್ದು, ವೃತ್ತಿಯಲ್ಲಿ ಕಲಾವಿದರಾಗಿದ್ದರು. ನೃತ್ಯ ಮತ್ತು ಸಂಗೀತದ ಕುರಿತು ಅದ್ಭುತವಾದ ಸಂಶೋಧನೆಗಳನ್ನು, ಅಪೂರ್ವವಾದಂತಹ ಗ್ರಂಥಗಳನ್ನು ರಚನೆ ಮಾಡಿದ್ದಾರೆ. ಅಂತಹ ಹಿರಿಯ ಖ್ಯಾತ ಸಂಗೀತ ಶಾಸ್ತ್ರಜ್ಞರನ್ನು ರಾಜ್ಯವು ಕಳೆದುಕೊಂಡಿದೆ ಎನ್ನುವ ದುಗುಡದ ಉಲ್ಲೇಖವನ್ನು ಮಾಡಿ, ನಾನು ಸಂತಾಪವನ್ನು ಸೂಚಿಸುತ್ತೇನೆ.

ಹಾಗಾಗಿ ಮೃತರುಗಳ ಆತ್ಮಕ್ಕೆ ಸ್ತಬ್ಧತೆಯನ್ನು ಕೋರುತ್ತಾ ಅವರ ಅಗಲಿಕೆಯ ನೋವನ್ನು ಸಹಿಸುವಂತಹ ಶಕ್ತಿಯನ್ನು ಅವರ ಕುಟುಂಬಕ್ಕೆ ಆ ಪರಮಾತ್ಮನು ಕರುಣಿಸಲಿ ಎಂದು ನಾನು ಪ್ರಾರ್ಥಿಸಿ, ಗೌರವಾನ್ವಿತರ ನಿಧನಕ್ಕೆ ಈ ಮೂಲಕ ಸಂತಾಪವನ್ನು ವ್ಯಕ್ತಪಡಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ತಂದಿರುವಂತಹ ಸಂತಾಪ ಸೂಚನೆಯ ಗೊತ್ತುವಳಿಯನ್ನು ಅಕ್ಷರಶಃ ನಾನು ಕೂಡ ಬೆಂಬಲಿಸುತ್ತೇನೆ. ನಾವು ಈಗಾಗಲೇ ಸಂತಾಪ ಸೂಚನೆ ಗೊತ್ತುವಳಿಯಲ್ಲಿ ಮೃತರ ಬಗ್ಗೆ ಸಾಕಷ್ಟು ಗುಣಗಾನವನ್ನು ಮಾಡಿದ್ದೇವೆ. ಅವರು ಮಾಡಿದಂತಹ ಸಾಧನೆ, ಅವರು ಆಯ್ಕೆ ಮಾಡಿರುವಂತಹ ಕ್ಷೇತ್ರ, ನಾಡು, ನುಡಿ ಮತ್ತು ಸಮಾಜಕ್ಕೆ ಕೊಟ್ಟಿರುವಂತಹ ಕೊಡುಗೆಗಳ ಬಹಳ ಸವಿಸ್ತಾರವಾಗಿ ಮಾನ್ಯ ಎಸ್.ಎಲ್. ಭೋಜೇಗೌಡರವರು ಮತ್ತು ಮಾನ್ಯ ಸಿ.ಎಂ. ಇಬ್ರಾಹಿಂರವರು ಕೆಲವೊಂದು ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಅದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಕರ್ನಾಟಕದ ಮಾಜಿ ರಾಜ್ಯಪಾಲರಾಗಿದ್ದ ಶ್ರೀ ತ್ರಿಲೋಕಿನಾಥ್ ಚತುರ್ವೇದಿರವರು, ವಿಧಾನ ಪರಿಷತ್ತಿನ ಮಾಜಿ ಸಭಾಪತಿ, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಉಪ ಸಭಾಧ್ಯಕ್ಷರಾಗಿದ್ದ ಶ್ರೀ ಡಿ. ಮಂಜುನಾಥರವರು, ಮಾಜಿ ಸಚಿವರು, ಉಭಯ ಸದನಗಳ ಸದಸ್ಯರಾಗಿದ್ದ ಡಾ॥ ವೈಜನಾಥ ಪಾಟೀಲ್‌ರವರು, ಸ್ವತಂತ್ರ ಹೋರಾಟಗಾರ, ಹಿರಿಯ ಸಮಾಜವಾದಿ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಜಿ. ಮಾದಪ್ಪರವರು, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಮಲ್ಲಾರಿಗೌಡ ಶಂಕರಗೌಡ ಪಾಟೀಲ್‌ರವರು, ಮಾಜಿ ಸಚಿವರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಅಮರನಾಥ ಶೆಟ್ಟಿರವರು, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ನಾರಾಯಣರಾವ್ ಗೋವಿಂದ ತರಳೆರವರು, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ  ಚಂದ್ರಕಾಂತ ಗುರುಪಾದಪ್ಪರವರು, ಉಡುಪಿಯ ಅಧ್ಯಾತ್ಮಿಕ ಮೇರು ಪರ್ವತವಾದಂತಹ ಪೇಜಾವರ ಮಠದ ಮುಖ್ಯಸ್ಥರು ಶ್ರೀ ಶ್ರೀ ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿರವರು, ಸ್ಯಾಕ್ಸೋಫೋನ್‌ವಾದಕರಾದ ಶ್ರೀ ಕದ್ರಿ ಗೋಪಾಲನಾಥ್‌ರವರು, ಕನ್ನಡದ ಹಿರಿಯ ಲೇಖಕರಾದ ಡಾ॥ ಎಂ.ಚಿದಾನಂದಮೂರ್ತಿರವರು, ಯಕ್ಷಗಾನ ಪಾರಂಗತರಾದ ಶ್ರೀ ಹೊಸ್ತೋಟ ಮಂಜುನಾಥ ಭಾಗವತ ರವರು, ಹಿರಿಯ ಸಾಹಿತಿಗಳಾದ ಡಾ॥ ಚೆನ್ನಣ್ಣ ವಾಲೀಕಾರರವರು, ಖ್ಯಾತ ಕೃಷಿ ವಿಜ್ಞಾನಿಯಾದ ಪ್ರೊ. ಎಸ್.ಎಸ್.ಕಟಗಿಹಳ್ಳಿಮಠರವರು, ಅಮೆರಿಕಾದ ನಾಸಾ ಸಂಸ್ಥೆಯ ನಿವೃತ್ತ ವಿಜ್ಞಾನಿಯಾದ ಹಾಗೂ ಲೇಖಕರಾದ ಡಾ॥ ನವರತ್ನ ಶ್ರೀನಿವಾಸ ರಾಜಾರಾಮ್‌ರವರು, ಹಿರಿಯ ಸಾಹಿತಿಗಳಾದ ಶ್ರೀ ಚಂದ್ರಕಾಂತ ಕರದಳ್ಳಿರವರು, ಪದ್ಮಶ್ರೀ ಪುರಸ್ಕೃತ ನೃತ್ಯ ವಿದ್ವಾಂಸ ಹಾಗೂ ಖ್ಯಾತ ಸಂಗೀತ ಶಾಸ್ತ್ರಜ್ಞರಾಗಿದ್ದ ಡಾ॥ ಆರ್.ಸತ್ಯನಾರಾಯಣರವರು ಇವರೆಲ್ಲರನ್ನೂ ಕುರಿತು ತಾವು ತಂದಿರುವಂತಹ ಸಂತಾಪ ಸೂಚನೆಯ ಗೊತ್ತುವಳಿಯನ್ನು ನಾನು ಬೆಂಬಲಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

007/17-02-2020/01-00/ಬಿಎಸ್‌ಡಿ-ಎಂಡಿ(ವಿಕೆ)

**ಶ್ರೀ ಎಸ್.ಆರ್. ಪಾಟೀಲ್ (ಮುಂದು-**

ಇವರೆಲ್ಲರೂ ನಮ್ಮನ್ನಗಲಿದ ಮಹಾನ್ ಸಾಧಕರು ಒಂದೊಂದು ಕ್ಷೇತ್ರದಲ್ಲಿಯೂ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಇವರೆಲ್ಲರೂ ಸಾರ್ವಜನಿಕ ಕ್ಷೇತ್ರವನ್ನು ಅರ್ಥಪೂರ್ಣ ಮಾಡಿದವರಾಗಿದ್ದು, ಸ್ವಾತಂತ್ರ್ಯ ಹೋರಾಟದಲ್ಲಿಯೂ ಪಾಲ್ಗೊಂಡವರೂ ಇದ್ದಾರೆ. ಅಧ್ಯಾತ್ಮಿಕ ಕ್ಷೇತ್ರಕ್ಕೆ ಗೌರವ ತರುವ ಕಾರ್ಯವನ್ನು ಶ್ರೀ ವಿಶ್ವೇಶ್ವರ ತೀರ್ಥ ಸ್ವಾಮೀಜಿಯವರು ಮಾಡಿದ್ದಾರೆ. ಕನ್ನಡ ಸಾರಸತ್ವ ಲೋಕವನ್ನೇ ಶ್ರೀಮಂತಗೊಳಿಸಿದ ಖ್ಯಾತ ಸಾಹಿತಿಗಳು ಇದ್ದಾರೆ. ಸಂಗೀತ ಮತ್ತು ಕೃಷಿ ಕ್ಷೇತ್ರವನ್ನು ಶ್ರೀಮಂತಗೊಳಿಸಿದರೂ ಇದ್ದಾರೆ. ವೈಜ್ಞಾನಿಕ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದವರೂ ಇದ್ದಾರೆ. ಇವರೆಲ್ಲರೂ ಸ್ವಾಸ್ಥ ಸಮಾಜ ನಿರ್ಮಾಣ ಮಾಡಲು ಹಾಗೂ ಅವರು ಆಯ್ದುಕೊಂಡ ಕ್ಷೇತ್ರಕ್ಕೆ ಗೌರವ ತರುವ ದಿಸೆಯಲ್ಲಿ ಮತ್ತು ನಾಡು-ನುಡಿಗೆ ಅವರದೇ ಆದ ಕೊಡುಗೆಯನ್ನು ಕೊಟ್ಟಿರುವ ಎಲ್ಲ ಗಣ್ಯರ ಸಂತಾಪ ಸೂಚಕ ಗೊತ್ತುವಳಿಗೆ ನಾನು ಬೆಂಬಲ ವ್ಯಕ್ತ ಮಾಡುವುದರ ಜೊತೆಗೆ ಒಂದೆರಡು ಮಾತುಗಳನ್ನು ಆಡಲು ಇಚ್ಛಿಸುತ್ತೇನೆ.

ಬಹುತೇಕವಾಗಿ ನಮ್ಮನ್ನಗಲಿರುವ ಗಣ್ಯರು ಪ್ರಪಂಚಕ್ಕೆ ಬಂದಾಗ ಅವರಿಗೆ ಉಸಿರಿತ್ತು; ಆದರೆ ಹೆಸರಿರಲಿಲ್ಲ. ಈ ಪ್ರಪಂಚಕ್ಕೆ ಬಂದ ನಂತರ ಅವರು ಆಯ್ದುಕೊಂಡ ಕ್ಷೇತ್ರ ಅಥವಾ ನಾಡು-ನುಡಿಗೆ, ಸಮಾಜಕ್ಕೆ ಅದ್ಭುತವಾದ ಕೊಡುಗೆಗಳನ್ನು ಕೊಟ್ಟು ನಮ್ಮನ್ನು ಅಗಲಿ ಹೋಗುವಾಗ ಅವರಿಗೆ ಉಸಿರಿರಲಿಲ್ಲ, ಆದರೆ ಹೆಸರಿತ್ತು. ಇಂತಹ ಸಾಧನೆಗಳನ್ನು ಇವರೆಲ್ಲರೂ ಮಾಡಿದ್ದಾರೆ. ಮಾನ್ಯ ಸಭಾಪತಿಯವರೇ, ಈ ಪ್ರಪಂಚದಲ್ಲಿ ಮೂರು ವರ್ಗದ ಜನರಿದ್ದಾರೆ. ಅನೇಕರು ನಮ್ಮ ಜೊತೆಯಲ್ಲಿ ಇದ್ದೂ ಇಲ್ಲದಂತೆ ಇರುತ್ತಾರೆ. ಅವರು ಇದ್ದಾರೆ ಎಂದರೆ ಇರುತ್ತಾರೆ, ಅವರಿಲ್ಲ ಎಂದರೆ ಇಲ್ಲ. ಇವರು ಮೊದಲನೆಯ ವರ್ಗ. ಅಂದರೆ ಸಮಾಜ, ನಾಡು-ನುಡಿ ಮತ್ತು ಸಮುದಾಯ ಸೇರಿದಂತೆ ಯಾವ ಕ್ಷೇತ್ರಕ್ಕೂ ಕೊಡುಗೆಯನ್ನು ಕೊಡದವರಾಗಿದ್ದಾರೆ. ಇವರು ಹಸಿವಾದಾಗ ಊಟ ಮಾಡುತ್ತಾರೆ, ನಿದ್ದೆ ಬಂದಾಗ ನಿದ್ದೆ ಮಾಡುತ್ತಾ ಜೀವನವನ್ನು ಸಾಗಿಸಿಕೊಂಡು ಹೋಗಿರುತ್ತಾರೆ. ಇಂತಹವರು ನಮ್ಮ ಜೊತೆಯಲ್ಲಿ ಇದ್ದು ಇಲ್ಲದಂತೆ ಹೋಗುತ್ತಾರೆ. ಇನ್ನು ಎರಡನೆಯ ವರ್ಗ ಎಂದರೆ ಸತ್ತು ಹೋಗಿರುವವರು ಸತ್ತಂತೆ ಇರುತ್ತಾರೆ. ಅವರೂ ಸಹ ಹಸಿವಾದಾಗ ಊಟ, ನಿದ್ದೆ ಬಂದಾಗ ನಿದ್ದೆ, ಮದುವೆ ವಯಸ್ಸಿನಲ್ಲಿ ಮದುವೆ ಮಾಡಿಕೊಂಡು, ಎಷ್ಟು ಬೇಕೋ ಅಷ್ಟು ಮಕ್ಕಳನ್ನು ಹೆಡೆದು ಒಂದು ದಿವಸ ಸತ್ತು ಹೋಗುತ್ತಾರೆ. ಇವರೂ ಸಮಾಜಕ್ಕೆ, ನಾಡು-ನುಡಿ ಅಥವಾ ಯಾವುದೇ ಒಂದು ಕ್ಷೇತ್ರಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುಗೆಯನ್ನು ನೀಡಿರುವುದಿಲ್ಲ. ಇನ್ನು ಮೂರನೆಯ ವರ್ಗದ ಬಗ್ಗೆ ತಾವು ಸಂತಾಪ ಸೂಚನೆಯ ಗೊತ್ತುವಳಿಯನ್ನು ಮಂಡಿಸಿದ್ದೀರಿ. ಇವರು ನಿಜವಾಗಲೂ ನಮ್ಮನ್ನಗಲಿ ಹೋಗಿದ್ದಾರೆ, ಭೌತಿಕವಾಗಿ ನಮ್ಮ ಮಧ್ಯೆದಲ್ಲಿ ಯಾರೂ ಇಲ್ಲ. ಆದರೆ ಅವರು ಬಿಟ್ಟುಹೋದ ಹೆಜ್ಜೆ ಗುರುತು ಮತ್ತು ಅಗಾಧವಾದ ಸಾಧನೆಗಳು ನಮ್ಮ ಮಧ್ಯೆ ಇವೆ. ಈಗಾಗಲೇ ಅನೇಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಬಗ್ಗೆ ಉಲ್ಲೇಖ ಮಾಡಿದ್ದೇನೆ. ಈ ಎಲ್ಲಾ ಕ್ಷೇತ್ರಗಳಲ್ಲಿ ಅದ್ವಿತೀಯ ಕೆಲಸಗಳನ್ನು ಮಾಡಿದ್ದು, ಇವರ್ಯಾರೂ ನಮ್ಮ ಮಧ್ಯೆದಲ್ಲಿ ಇಲ್ಲವೆಂದರೂ ಅವರ ಸಾಧನೆಗಳಿಂದ ನಮ್ಮ ಮಧ್ಯೆ ಜೀವಂತವಾಗಿದ್ದಾರೆ ಎನ್ನುವ ಭಾವನೆ ಬರುತ್ತದೆ. ಅವರ ಆದರ್ಶಗಳು, ಪ್ರಖರವಾದ ವಿಚಾರಗಳನ್ನು ನಮಗೆ ಬಿಟ್ಟು ಹೋಗಿದ್ದಾರೆ. ಅವರು ಬಿಟ್ಟುಹೋಗಿರುವ ಹೆಜ್ಜೆ ಗುರುತುಗಳನ್ನು ನಾವು ಅನುಸರಿಸಿ ಹೋಗುವುದರಿಂದ ಆ ಕ್ಷೇತ್ರಕ್ಕೆ ಗೌರವ ಸಲ್ಲಿಸಿದಂತೆ ಎಂದಾಗದಿದ್ದರೂ, ಒಂದು ಅರ್ಥಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದಂತಾಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಈ ಪ್ರಪಂಚಕ್ಕೆ ಮಗು ಅಳುವ ಶಬ್ದದೊಂದಿಗೆ ಪಾದಾರ್ಪಣೆ ಮಾಡುವಾಗ ಇಡೀ ಪ್ರಪಂಚ ನಗುನಗುತ್ತಾ ಸ್ವಾಗತ ಮಾಡುತ್ತದೆ. ಆ ಮಗು ಬೆಳೆದು ದೊಡ್ಡವನಾಗಿ ಸಮಾಜಕ್ಕೆ ನಾಡು–ನುಡಿಗೆ, ಆಯ್ದೆ ಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆಯನ್ನು ಕೊಟ್ಟು ನಗುನಗುತ್ತಾ ಹೋಗುವಾಗ ಇಡೀ ಪ್ರಪಂಚವೇ ಅಳುತ್ತದೆ. ಇಂತಹ ಬದುಕನ್ನು ಸಾಗಿಸಿದವರಿಗೆ ಸಾರ್ಥಕವಾಗಿ ಬದುಕಿದವರು ಎಂದು ಜಗಜ್ಜಾಹಿರವಾದ ವಿಷಯವಾಗಿದೆ. ಅಂದರೆ ಅಂತಹ ಸಾರ್ಥಕವಾಗಿ ಬದುಕಿದವರ ಬಗ್ಗೆ ಸಂತಾಪ ಸೂಚನೆಯನ್ನು ತಂದಿದ್ದೀರಿ, ಇವರೆಲ್ಲರೂ ಅರ್ಥಪೂರ್ಣ ಹಾಗೂ ಆದರ್ಶವಾಗಿ ಬದುಕಿದವರು. ಅಷ್ಟೇ ಅಲ್ಲದೇ ಸಾರ್ಥಕವಾಗಿ ಬದುಕಿದ ವ್ಯಕ್ತಿಗಳಾಗಿದ್ದಾರೆ ಎಂಬ ಮಾತನ್ನು ಹೇಳಬಯಸುತ್ತೇನೆ. ಇವರೆಲ್ಲರೂ ನಮ್ಮನ್ನಗಲಿ ಅವರ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಿದ್ದಾರೆ. ಅನೇಕ ಪ್ರಖರವಾದ ಹಾಗು ಮಹತ್ವದ ಸಂಗತಿಗಳನ್ನು ಮತ್ತು ಅಗಾಧವಾದ ಸಾಧನೆಗಳ ವಿಚಾರ ಅಥವಾ ಕಾರ್ಯಗಳು ನಮ್ಮೆಲ್ಲರಿಗೂ ಮಾರ್ಗದರ್ಶಕವಾಗಿವೆ. ಅವರು ಏನಾದರೂ ಕನಸು ಕಂಡು, ಆ ವಿಚಾರಗಳು ಅಪೂರ್ಣವಾಗಿದ್ದರೆ ಅವುಗಳನ್ನು ಪೂರ್ಣ ಮಾಡುವ ಕೆಲಸ ನಮ್ಮ ಮೇಲಿದೆ. ಈ ರೀತಿ ಮಾಡಿದಾಗ ಮಾತ್ರ ನಿಜವಾಗಿ ಭಾವಪೂರ್ಣ ಹಾಗೂ ಅರ್ಥಪೂರ್ಣವಾದ ಶ್ರದ್ಧಾಂಜಲಿ ಸಲ್ಲಿಸಿದಂತೆ ಎಂದು ಭಾವಿಸಿ, ನಮ್ಮಗಲಿದ ಎಲ್ಲಾ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಕುಟುಂಬದ ಎಲ್ಲಾ ವರ್ಗದವರು, ಅಭಿಮಾನಿಗಳು ಹಾಗೂ ಹಿತೈಶಿಗಳಿಗೆ ಮತ್ತು ನಮ್ಮೆಲ್ಲರಿಗೂ ಭಗವಂತನು ಕರುಣಿಸಲಿ ಎಂದು ಪ್ರಾರ್ಥಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಈಗ ಸಭೆಯು ಮುಕ್ತಾಯಗೊಂಡು ನಾಳೆ ಬೆಳಿಗ್ಗೆ 10–30 ಗಂಟೆಗೆ ಸೇರುವುದು.

**(ಸದನವು ಮಧ್ಯಾಹ್ನ 01 ಗಂಟೆ 08 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 18ನೇ ಫೆಬ್ರವರಿ ಮಾಹೆ 2020ರ ಮಂಗಳವಾರದಂದು ಬೆಳಿಗ್ಗೆ 10 ಗಂಟೆ 30 ನಿಮಿಷಗಳಿಗೆ ಸೇರಲು ನಿಶ್ಚಯಿಸಿತು)**

******

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"